# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ
No.1 Leading in Local News Paper
80,000
HAMPI TIMES E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201





ಸಂಪುಟ:02 Volume:02 • ಸಂಚಿಕೆ: 49 Issue: 49 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 16.08.2024 16.08.2024 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2





ಹೊಸಪೇಟೆ ಹೊರವಲಯದ ಶ್ರೀ ಶನೇಶ್ವರ ದೇವಸ್ಥಾನದಲ್ಲಿ ದಿನಾಂಕ 17-08-2024 ರಂದು ಶ್ರಾವಣ ಶುದ್ಧ ತ್ರಯೋದಶಿ ಶನಿವಾರದಂದು


ಶ್ರೀ ಶನಿದೇವರ ಪ್ರತಿಷ್ಠಾಪಿಸಿದ 27ನೇ ವಾರ್ಷಿಕೋತ್ಸವ ಸಮಾರಂಭ

ಆ.16 ರಾತ್ರಿ ಪುರಾಣ ಪ್ರವಚನ । ಆ.17ರ ಬೆಳಿಗ್ಗೆ ಗಂಗಾಪೂಜೆ ಶನಿದೇವರಿಗೆ ತೈಲಾಭಿಷೇಕ, ಫಲ-ಪಂಚಾಮೃತ ಅಭಿಷೇಕ, ವಿಶೇಷ ಪುಷ್ಪಲಂಕಾರ

ಧರ್ಮ ಸಭೆ ಬೆಳಗ್ಗೆ 11-00 ಗಂಟೆಗೆ, ಸಾನ್ನಿಧ್ಯ ಶ್ರೀಮನ್ ಉಜ್ಜಯಿನಿ ಸದ್ಧರ್ಮ ಸಿಂಹಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು

ನೇತೃತ್ವ: ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠದ ಶ್ರೀಮನ್.ನಿ.ಪ್ರ.ಜಗದ್ಗರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು M: 9448795049, 8762397479

ಸರ್ವರಿಗೂ ಸ್ವಾಗತ ಕೋರುವವರು: ಶ್ರೀ ಶನೇಶ್ವರ ದೇವಸ್ಥಾನ ಸಮಿತಿ (ರಿ), ಪಂಚಾಚಾರ್ಯನಗರ, ರಾಷ್ಟ್ರೀಯ ಹೆದ್ದಾರಿ 50, ಹೊಸಪೇಟೆ, ವಿಜಯನಗರ ಜಿಲ್ಲೆ




**ಮೈಕ್ರೋ ನ್ಯೂಸ್**

## ಆಗಸ್ಟ್ 17ರಂದು ನೇರ ಸಂದರ್ಶನ

**ಹಂಪಿ ಟೈಮ್ಸ್ ಕೊಪ್ಪಳ**
ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಆಗಸ್ಟ್ 17ರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30ರವರೆಗೆ ವಾಕ್‌ಇನ್ ಇಂಟರ್‌ವ್ಯೂವ್ ಆಯೋಜಿಸಲಾಗಿದೆ.

ಈ ವಾಕ್‌ಇನ್ ಇಂಟರ್‌ವ್ಯೂವ್‌ನಲ್ಲಿ ಖಾಸಗಿ ಪ್ರತಿಷ್ಠತ ಕಂಪನಿಗಳು ಭಾಗವಹಿಸಲಿದ್ದು, ತಮ್ಮಲ್ಲಿನ ಖಾಲಿ ಹುದ್ದೆಗಳನ್ನು ವಾಕ್‌ಇನ್ ಇಂಟರ್‌ವ್ಯೂವ್ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ.ಯಾವುದೇ ಶುಲ್ಕ ಇರುವುದಿಲ್ಲ. ಎಲ್ಲರಿಗೂ ಉಚಿತ ಪ್ರವೇಶವಿರುತ್ತದೆ.

ಆದ್ದರಿಂದ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ, ಪಿಯುಸಿ, ಡಿಪ್ಲೋಮಾ, ಟೂಲ್ ಮತ್ತು ಡೈಮೇಕಿಂಗ್+ಬಿಇ -ಮೇಕಾನಿಕಲ್, ಬಿಇ-ಎಲೆಕ್ಟಿಕಲ್, ಎಮ್‌ಎಸ್‌ಸಿ-ಮೇಥ ಮೆಟಿಕ್ ಸೇರಿದಂತೆ ಯಾವುದೇ ಪದವೀಧರರು ಅಭ್ಯರ್ಥಿಗಳಿಗೆ ವಾಕ್‌ಇನ್ ಇಂಟರ್‌ವ್ಯೂವ್ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಈ ವಾಕ್‌ಇನ್ ಇಂಟರ್‌ವ್ಯೂವ್‌ನಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಅರ್ಹ ವಿದ್ಯಾರ್ಹತೆ ಹೊಂದಿದ ಯುವಕ ಯುವತಿಯರು ನಿರುದ್ಯೋಗಿ ಅಭ್ಯರ್ಥಿಗಳು ಮೇಲೆ ತಿಳಿಸಿರುವ ಹುದ್ದೆಗಳ ಅನುಗುಣವಾಗಿ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳು ಮತ್ತು ಆಧಾರ್ ಕಾರ್ಡಿನ ಪ್ರತಿ, ಬಯೋಡಾಟಾ ಹಾಗೂ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ಈ ವಾಕ್‌ಇನ್ ಇಂಟರ್‌ವ್ಯೂವ್‌ನಲ್ಲಿ ಭಾಗವಹಿಸಿ, ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ. ಎಂದು ತಿಳಿಸಿದ್ದಾರೆ.

# ವೀರಯೋಧರ ಸ್ಮರಣೆ ನಮ್ಮೆಲ್ಲರ ಕರ್ತವ್ಯ

## ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನದಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿಕೆ । ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ, ಸಾಧಕರಿಗೆ ಸನ್ಮಾನ

**ಹಂಪಿ ಟೈಮ್ಸ್ ಹೊಸಪೇಟೆ**
ದೇಶದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಎಲ್ಲಾ ವೀರಯೋಧರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಚಿವರು ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಝೆಡ್ ಜಮೀರ್ ಅಹ್ಮದ್ ಖಾನ್ ಹೇಳಿದರು.

ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹೊಸಪೇಟೆ ನಗರಸಭೆ ಇವರ ಸಹಯೋಗದಲ್ಲಿ ಆಗಸ್ಟ್ 15ರಂದು ಹೊಸಪೇಟೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾದ 78ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿರುವ 405 ಅಡಿ ಎತ್ತರದ ಧ್ವಜ ಸ್ತಂಭದ ಧ್ವಜಾರೋಹಣ, ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಪಥಸಂಚಲನ ವೀಕ್ಷಿಸಿ ಗೌರವ ವಂದನೆ ಸ್ವೀಕರಿಸಿ, ಜ್ಯೋತಿ ಬೆಳಗಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನದಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ರಾಷ್ಟ್ರಕ್ಕೆ ಸ್ವಾತಂತ್ರವನ್ನು ತಂದು ಕೊಟ್ಟ ರಾಷ್ಟ್ರಪಿತ ಮಹಾತ್ಮಗಾಂಧೀಜಿ, ಸರ್ದಾರ್ ವಲ್ಲಭಭಾಯಿ ಪಟೇಲ್, ನೆಹರು, ಸುಭಾಷ್ ಚಂದ್ರಬೋಸ್, ದಾದಾಬಾಯಿ ನವರೋಜಿ, ಮೌಲಾನ ಅಬುಲ್ ಕಲಾಂ ಆಜಾದ್, ಸ್ವಾತಂತ್ರಕ್ಕಾಗಿ ಪ್ರಾಣತ್ಯಾಗ ಮಾಡಿದ ಭಗತ್ ಸಿಂಗ್, ಚಂದ್ರಶೇಖರ ಅಜಾದ್, ರಾಜ್ ಗುರು, ಸುಖ್ ದೇವ್ ಹಾಗೂ ಸಾವಿರಾರು ವೀರಯೋಧರನ್ನು ಇಂದು ನಾವು ನೆನಪಿಕೊಳ್ಳುತ್ತಿದ್ದೇವೆ. ಬೇರೆ ದೇಶಗಳಿಗೆ ಹೋಲಿಕೆ ಮಾಡಿದರೆ ನಮ್ಮ ಭಾರತವು



ನಂಬರ್ ಒನ್ ದೇಶವಾಗಿದೆ ಎಂದರು.

ರಾಜ್ಯ ಸರ್ಕಾರ 5 ಗ್ಯಾರೆಂಟಿ ಯೋಜನೆಗಳ ಅನುಷ್ಠಾನಕ್ಕಾಗಿ 55 ರಿಂದ 60 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದೆ. ಇದರ ನಡುವೆ ಮುಖ್ಯಮಂತ್ರಿಗಳು ಬಡವರಿಗಾಗಿ 6ನೇ ಗ್ಯಾರೆಂಟಿ ಯೋಜನೆ ಮಾದರಿಯಲ್ಲಿ ಸರ್ಕಾರದಿಂದ 2.30 ಲಕ್ಷ ಫಲಾನುಭವಿಗಳಿಗೆ ಮನೆ ಮಂಜೂರು ಮಾಡಿದ್ದಾರೆ. ವಸತಿ ಯೋಜನೆಗಳಡಿ ಕೇಂದ್ರ ಸರ್ಕಾರದಿಂದ 1.50 ಲಕ್ಷ ಹಾಗೂ ರಾಜ್ಯ ಸರ್ಕಾರದಿಂದ 1.20 ಲಕ್ಷ ಎಸ್ಸಿ & ಎಸ್ಟಿಯವರಿಗೆ 2 ಲಕ್ಷಗಳ ಸಹಾಯಧನವನ್ನು ನೀಡಲಾಗುತ್ತದೆ. ಮನೆ ನಿರ್ಮಾಣಕ್ಕೆ ಬಡವರಿಗೆ ತಮ್ಮ ಪಾಲಿನ ವಂತಿಕೆ ಪಾವತಿಸಲು ಕಷ್ಟ ಉಂಟಾಗುತ್ತಿರುವುದನ್ನು ಮನಗಂಡ ನಮ್ಮ ಸರ್ಕಾರವು ರಾಜ್ಯದ ವಸತಿ ಯೋಜನೆಗಳಿಗೆ ರೂ. 9,500 ಕೋಟಿ ಅನುದಾನವನ್ನು ಮಂಜೂರು ಮಾಡಿದೆ. ಮನೆ ನಿರ್ಮಾಣಕ್ಕೆ ಫಲಾನುಭವಿಗಳ ಪಾಲಿನ ವಂತಿಕೆ ಮೊತ್ತವನ್ನು ಕಡಿಮೆ ಮಾಡುವಂತೆ ಆಟೋ ಚಾಲಕರು ಸೇರಿದಂತೆ ವಿವಿಧ ವರ್ಗಗಳ ಬಡ ಜನರ ಕೋರಿಕೆಯಂತೆ ಅವರ ಅನುಕೂಲಕ್ಕಾಗಿ ವಂತಿಕೆ ಮೊತ್ತದಲ್ಲಿ ಒಂದು ಲಕ್ಷ ರೂ.ಗಳನ್ನು ಕಡಿಮೆ ಮಾಡಿದೆ. ನಮ್ಮ ಸರ್ಕಾರದ ಮಹತ್ತರ ಯೋಜನೆಗಳಾದ ಗೃಹ ಲಕ್ಷ್ಮೀ ಗೃಹಜ್ಯೋತಿ, ಶಕ್ತಿ ಯೋಜನೆ, ಅನ್ನಭಾಗ್ಯ ಇಂದು ಕೋಟ್ಯಂತರ ಜನರಿಗೆ ನೆಮ್ಮದಿಯ ಬದುಕು ಕಲ್ಪಿಸುತ್ತಿದೆ. ಸರ್ಕಾರದ ಐದು ಮಹತ್ತರ ಯೋಜನೆಗಳನ್ನು ಎಂತಹ ಪರಿಸ್ಥಿತಿಯಲ್ಲಿಯೂ ನಿಲ್ಲಿಸದೇ ಮುಂದುವರೆಸುವ ಮೂಲಕ ನಮ್ಮ ಸರ್ಕಾರ ನುಡಿದಂತೆ ನಡೆದುಕೊಳ್ಳುತ್ತಿದೆ ಎಂದು ತಿಳಿಸಿದರು.

ಗೇಟ್ ಚೈನ್ ಲಿಂಕ್ ಕಟ್ ಹಿನ್ನೆಲೆ ಸ್ಟಾಪ್ ಗೇಟ್ ಅಳವಡಿಕೆಗೆ ಕ್ರಮ: ತುಂಗಭದ್ರಾ ಆಣೆಕಟ್ಟಿನ 19ನೇ ಗೇಟ್ ಚೈನ್ ಲಿಂಕ್ ಕಟ್ ಹಿನ್ನೆಲೆಯಲ್ಲಿ ಹೆಚ್ಚಿನ ಪ್ರಮಾಣದ ನೀಡು ನದಿಗೆ ಹರಿಯುತ್ತಿದ್ದು, ರೈತರು ಆತಂಕದಲ್ಲಿದ್ದರು. ಆದರೆ, ಇಂಜಿರ್ಸ್ ಮತ್ತು ತಾಂತ್ರಿಕ ತಂಡದವರು ಸ್ಟಾಪ್ ಗೇಟ್ ಅಳವಡಿಕೆಗೆ ತ್ವರಿತವಾಗಿ ಕ್ರಮ ಕೈಗೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಿನ್ನೆಯೇ ಪೂಜಾ ಕಾರ್ಯಕ್ರಮವನ್ನು ನೆರವೇರಿಸಲಾಗಿದೆ ಹಾಗೂ ಆಗಸ್ಟ್ 16ರಂದು ಸ್ಟಾಪ್ ಗೇಟ್ ಅಳವಡಿಕೆ ಕಾರ್ಯ ನಡೆಯಲಿದೆ. ರೈತರು ಯಾವುದೇ ರೀತಿಯ ಆತಂಕ ಪಡುವ ಅಗತ್ಯವಿಲ್ಲ ಎಂದರು.

ಶಾಸಕರಾದ ಹೆಚ್.ಆರ್.ಗವಿಯಪ್ಪ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎನ್.ಎಫ್ ಇಮಾಮ್ ನಿಯಾಜಿ, ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ್, ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೊಂಗ್ಜಾಯ್ ಮೊಹಮ್ಮದ್ ಅಕ್ರಮ ಅಲಿ ಷಾ, ಜಿಲ್ಲಾ ಪೊಲೀಸ್ ವಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್., ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಅರ್ಸಲನ್, ಅಪರ ಜಿಲ್ಲಾಧಿಕಾರಿಗಳಾದ ಇ.ಬಾಲಕೃಷ್ಣಪ್ಪ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿಗೆ ಸ್ಕೂಟಿ+1ಲಕ್ಷ ಪ್ರೋತ್ಸಾಹ ಧನ: ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ವಿಜಯನಗರ ಜಿಲ್ಲೆಯ ಕೊಟ್ಟರಿನ >>3

# ಆಳುವವರು, ಅಧಿಕಾರಿಗಳ ನಿರ್ಲಕ್ಷ್ಯವೇ ಅಭಿವೃದ್ಧಿಗೆ ಹಿನ್ನಡೆ

## ಶಾಸಕ ಕೆ.ನೇಮಿರಾಜ್‌ನಾಯ್ಕ್ ಹೇಳಿಕೆ । ತ್ಯಾಗಬಲಿದಾನದ ಸ್ವಾತಂತ್ರ ಅನುಭವಿಸುತ್ತಿದ್ದೇವೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಪೂರ್ವಜರು ದೇಶಕ್ಕಾಗಿ ತಮ್ಮ ಪ್ರಾಣಗಳನ್ನು ಲೆಕ್ಕಿಸದೆ, ತ್ಯಾಗ ಬಲಿದಾನ ಗಳಿಂದ ದೊರಕಿಸಿಕೊಟ್ಟ ಸ್ವಾತಂತ್ರವನ್ನು ನಾವು ಅನುಭವಿಸುತ್ತದ್ದೇವೆ. ಆದ್ದರಿಂದ ಅಂತಹ ಮಹಾನೀಯರನ್ನು ನೆನೆಯಲೇಬೇಕು ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ಅಭಿಪ್ರಾಯ ವ್ಯಪ್ತಪಡಿಸಿದರು.

ಪಟ್ಟಣದ ಶ್ರೀಗಂಗಾವತಿ ಭೀಮಪ್ಪನವರ ಸರ್ಕಾರಿ ಪ.ಪೂ. ಕಾಲೇಜ್‌ನ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತದಿಂದ, ಗುರುವಾರ ಹಮ್ಮಿಕೊಳ್ಳಲಾಗಿದ್ದ 78ನೇ ಸ್ವಾತಂತ್ರೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ನಿಮ್ಮ ಮಕ್ಕಳಿಗೆ >>4



# ಶಾಂತಿ ಸೌಹಾರ್ದತೆ ಮೂಲ ಮಂತ್ರವಾಗಲಿ

## ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿಕೆ । 78ನೇ ಸ್ವಾತಂತ್ರ್ಯ ದಿನಾಚರಣೆ



**ಹಂಪಿ ಟೈಮ್ಸ್ ಕೂಡ್ಲಿಗಿ**
ಶಾಂತಿ, ಸೌಹಾರ್ದತೆ ನಮ್ಮ ಮೂಲ ಮಂತ್ರವಾಗಬೇಕು, ಸರ್ವರಲ್ಲೂ ಸಾಮರಸ್ಯ ಭಾವನೆ ಮೂಡಬೇಕು ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು. ಪಟ್ಟಣದ ಮಹಾದೇವ ಮೈಲಾರ ಕ್ರೀಡಾಂಗಣದಲ್ಲಿ ಗುರುವಾರ ತಾಲೂಕು ಆಡಳಿತ ಏರ್ಪಡಿಸಿದ್ದ 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗಿಯಾಗಿ ಮಾತನಾಡಿದರು.

ಬ್ರಿಟಿಷರ ಕಪಿಮುಷ್ಠಿಯಿಂದ ಬಿಡಿಸಿ ಸ್ವಾತಂತ್ರ್ಯಕ್ಕಾಗಿ ಅನೇಕ ಮಹನೀಯರು ಪ್ರಾಣ ಬಲಿದಾನಗೈದರು. ಅವರ ಧೈರ್ಯ, ಸಾಹಸದಿಂದ ನಾವುಗಳು ಇಂದು ಸ್ವಾತಂತ್ರ್ಯದ ದಿನವನ್ನು ಆಚರಣೆ ಮಾಡಲು ಸಾಧ್ಯವಾಯಿತು. ಮಹಾತ್ಮ ಗಾಂಧಿ, ಸುಭಾಶ್ ಚಂದ್ರಬೋಸ್, ತಿಲಕ್ ಸೇರಿದಂತೆ ಅನೇಕ ಮಹನೀಯರನ್ನು ನಾವು ಸ್ಮರಿಸಿ ಅವರ ಮೇಲ್ಪಂಕ್ತಿಯಲ್ಲಿ ನಾವುಗಳು ಸಾಗಬೇಕು. ದೇಶದ ಸುಭದ್ರತೆಗೆ ಯುವಕರು ಮುಂದಾಗಬೇಕು ಎಂದರು.

ಕ್ಷೇತ್ರದಲ್ಲಿ ಈಗಾಗಲೇ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸೌಲಭ್ಯಗಳನ್ನು ಒದಗಿಸಲು ಅನೇಕ ಯೋಜನೆಯನ್ನು ರೂಪಿಸಿದ್ದು, ಸರ್ಕಾರದ ಅನೇಕ ಸೌಲಭ್ಯಗಳನ್ನು ಒದಗಿಸಿದ ಆತ್ಮತೃಪ್ತಿ ನನಗಿದೆ, ಯಾವುದೆ ಭೇದ,ಭಾವನೆ ಇಲ್ಲದೆ ಸರ್ವ ಜನಾಂಗಕ್ಕೂ ನಾನು ಸೌಲಭ್ಯಗಳನ್ನು ಒದಗಿಸಿದ್ದೇನೆ. ಮುಂದಿನ ದಿನಗಳಲ್ಲಿ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ದಮನಿತರ ಶ್ರೇಯೋಭಿವೃದ್ದಿಗೆ ಶ್ರಮಿಸುವೆ ಎಂದು ಭರವಸೆ ನೀಡಿದರು.

ತಹಸೀಲ್ದಾರ್ ಎಂ.ರೇಣುಕ ಧ್ವಜಾರೋಹಣ ನೇರವೇರಿಸಿ ಮಾತನಾಡಿದರು. ಇದೇ ಸಂಧರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ 60 ಜನರಿಗೆ ಶಾಸಕರು ಸನ್ಮಾನ ಮಾಡಿದರು. ತಾಪಂ ಇಲಾಖೆ ವತಿಯಿಂದ ಸುಮಾರು 30 ಕೂ ಹೆಚ್ಚು ತ್ರಿಚಕ್ರ ವಾಹನ ವಿತರಣೆ ಮಾಡಿದರು. ನಂತರ ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ವಿಧ್ಯಾರ್ಥಿನಿ ಹಿಮಜ ಅವರ ನಾನಾ ಭಂಗಿಯ ಯೋಗಾಸನ ನೆರೆದಿದ್ದ ಪ್ರೇಕ್ಷಕರ ಗಮನ ಸೆಳೆಯಿತು. ತಾಪಂ ಇಒ ವೈ.ರವಿಕುಮಾರ್, ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ, ಪಪಂ ಮುಖ್ಯಾಧಿಕಾರಿ ಎಂ.ಕೆ.ಮುಗಳಿ, ಗ್ರೇಡ್2 ತಹಸೀಲ್ದಾರ್ ನೇತ್ರಾವತಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪಿ.ಶಿವರಾಜ್, ಸಿಪಿಐ ಸುರೇಶ್ ತಳವಾರ, ಪಪಂ ಸದಸ್ಯರಾದ ಕಾವಲಿ ಶಿವಪ್ಪನಾಯಕ, ಕೆ.ಈಶಪ್ಪ, ಸಿರಬಿ ಮಂಜುನಾಥ, ಸಯ್ಯದ್ ಶುಕೂರ್, ರೇಣುಕಾ ದುರುಗೇಶ್, ಲಕ್ಷ್ಮೀದೇವಿ, ಸರಸ್ವತಿ, ಲೀಲಾವತಿ ಪ್ರಭಾಕರ ಸೇರಿದಂತೆ ಅನೇಕರು ಇದ್ದರು.




## ವಿಜ್ಞಾನ

# ಗಾಳಿಗೆ ತೆರೆದಿಟ್ಟ ಪೆಟ್ರೋಲ್ ಏಕೆ ಆವಿಯಾಗುತ್ತದೆ?

■ ಆರ್.ಬಿ.ಗುರುಬಸವರಾಜ

ಅನುಪಮಳ ತಂದೆ ಬಾಟಲಿಯಲಿದ್ದ ಪೆಟ್ರೋಲ್‌ನ್ನು ಬೈಕ್‌ಗೆ ಹಾಕಲು ಹೇಳಿ ಒಳಗೆ ಹೋದರು. ಅದರಂತೆ ಅವಳು ಬೈಕ್‌ನ ಪೆಟ್ರೋಲ್ ಟ್ಯಾಂಕ್‌ನ ಮುಚ್ಚಳ ತೆರೆದು ಪೆಟ್ರೋಲ್ ಹಾಕಿದಳು. ಸುಮಾರು ಒಂದು ಗಂಟೆಯ ಬಳಿಕ ತಂದೆ ಬೈಕ್‌ನ ಹತ್ತಿರ ಬಂದು ನೋಡಿದರು. ಪೆಟ್ರೋಲ್ ಟ್ಯಾಂಕ್‌ನ ಮುಚ್ಚಳ ತೆರೆದೇ ಇತ್ತು. ಬೈಕ್‌ನ್ನು ಅಲುಗಾಡಿಸಿದರು. ಪೆಟ್ರೋಲ್ ಸಂಪೂರ್ಣವಾಗಿ ಆವಿಯಾಗಿತ್ತು. ಅನುಪಮಳನ್ನು ಕೂಗಿ ಕರೆದರು. ಟ್ಯಾಂಕ್‌ನ ಮುಚ್ಚಳ ಮುಚ್ಚದಿರುವುದಕ್ಕೆ ಪೆಟ್ರೋಲ್ ಆವಿಯಾಗಿದೆ ಎಂದು ಸಿಡಿಮಿಡಿಗೊಂಡರು. ಮಾಡಿದ ತಪ್ಪಿಗಾಗಿ ತಂದೆಯ ಬಳಿ ಕ್ಷಮೆ ಕೇಳಿದ ಅನುಪಮ "ಪಪ್ಪಾ. ಗಾಳಿಗೆ ತೆರೆದಿಟ್ಟ ಪೆಟ್ರೋಲ್ ಏಕೆ ವೇಗವಾಗಿ ಆವಿಯಾಗುತ್ತದೆ?" ಎಂದು ಕೇಳಿದಳು. ಅವಳ ಮುಗ್ಧತೆಗೆ ಮನಸೋತ ತಂದೆ ಪೆಟ್ರೋಲ್ ಆವಿಯಾಗಲು ಕಾರಣ ತಿಳಿಸಿದರು. ಪೆಟ್ರೋಲ್ ಹೈಡ್ರೋಕಾರ್ಬನ್‌ಗಳ ಮಿಶ್ರಣವಾಗಿದೆ. ಇದು ಕಾರ್ಬನ್



ಮತ್ತು ಹೈಡ್ರೋಜನ್ ಪರಮಾಣುಗಳಿಂದ ಸಂಯೋಜಿಸಲ್ಪಟ್ಟ ಸಾವಯವ ಸಂಯುಕ್ತಗಳಾಗಿವೆ. ಪೆಟ್ರೋಲ್‌ನಲ್ಲಿರುವ ಹೈಡ್ರೋಕಾರ್ಬನ್ ಅಣುಗಳು ದುರ್ಬಲವಾದ ಅಂತರ್ ಅಣುಗಳ ಆಕರ್ಷಣೆಯನ್ನು ಹೊಂದಿವೆ. ಅಂದರೆ ಅವು ಪರಸ್ಪರ ಬಲವಾಗಿ ಬಂಧಿತವಾಗಿಲ್ಲ. ಅವುಗಳು ಕುದಿಯುವ ಬಿಂದುವಿಗಿಂತ ಕಡಿಮೆ ತಾಪಮಾನದಲ್ಲಿ ಅನಿಲ ಹಂತವನ್ನು ತಲುಪಲು ಅನುವು ಮಾಡಿಕೊಡುತ್ತವೆ. ಅಲ್ಲದೇ ಹೈಡ್ರೋಕಾರ್ಬನ್ ಅಣುಗಳು ಸದಾ ದ್ರವ ಹಂತದಿಂದ ತಪ್ಪಿಸಿಕೊಂಡು ಅನಿಲವಾಗಲು ಪ್ರಯತ್ನಿಸುತ್ತಲೇ ಇರುತ್ತವೆ. ಹಾಗಾಗಿ ಗಾಳಿಗೆ ಒಡ್ಡಿದ ಪೆಟ್ರೋಲ್ ವೇಗವಾಗಿ ಆವಿಯಾಗುತ್ತದೆ. ಪೆಟ್ರೋಲ್ ಕಡಿಮೆ ಕುದಿಯುವ ಬಿಂದುವನ್ನು ಹೊಂದಿರುವುದರಿಂದ ಮತ್ತು ಬಾಷ್ಪಶೀಲವಾಗಿರುವುದರಿಂದ ಸುಲಭವಾಗಿ ಆವಿಯಾಗುತ್ತದೆ. ಸಾಮಾನ್ಯವಾಗಿ ಕೋಣೆಯ ಉಷ್ಣಾಂಶ ಮತ್ತು ವಾತಾವರಣದ ಒತ್ತಡದಲ್ಲಿ ಪೆಟ್ರೋಲ್ ದ್ರವದಿಂದ ಅನಿಲ ಸ್ಥಿತಿಗೆ ಸುಲಭವಾಗಿ ಪರಿವರ್ತನೆ ಹೊಂದುತ್ತದೆ.

ಈ ಆವಿಯಾಗುವಿಕೆಯ ಪ್ರಕ್ರಿಯೆಯು ತಾಪಮಾನ, ಮೇಲ್ಮೈ ವಿಸ್ತೀರ್ಣ ಮತ್ತು ಸುತ್ತಮುತ್ತಲಿನ ಗಾಳಿಯಲ್ಲಿನ ಭಾಗಶಃ ಒತ್ತಡದಂತಹ ಅಂಶಗಳಿಂದ ಪ್ರಭಾವಿತವಾಗಿರುತ್ತದೆ. ಬಿಸಿ ತಾಪಮಾನದಲ್ಲಿ ಪೆಟ್ರೋಲ್ ಅಣುಗಳ ಚಲನ ಶಕ್ತಿಯು ಹೆಚ್ಚಾಗುತ್ತದೆ. ಇದರಿಂದ ಪೆಟ್ರೋಲ್ ಸುಲಭವಾಗಿ ಅನಿಲ ಹಂತಕ್ಕೆ ಬದಲಾಗುತ್ತದೆ. ಅದೇ ರೀತಿ ಗಾಳಿಗೆ ತೆರೆದುಕೊಂಡ ಪೆಟ್ರೋಲ್‌ನ ಮೇಲ್ಮೈನ ವಿಸ್ತೀರ್ಣವು ಹೆಚ್ಚುವುದರಿಂದಲೂ ಪೆಟ್ರೋಲ್ ವೇಗವಾಗಿ ಆವಿಯಾಗುತ್ತದೆ.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಪಾಲಕರ ಕರ್ತವ್ಯ ಮತ್ತು ನಿರೀಕ್ಷೆಗಳು

ನಿಮಗೆ ಓದಿಸಲು ಅದೆಷ್ಟು ಖರ್ಚು ಮಾಡಿದ್ದೇವೆ ಗೊತ್ತಾ, ಹೊಟ್ಟೆ ಬಟ್ಟೆ ಕಟ್ಟಿ ನಾವು ಅಷ್ಟೊಂದು ಸಪೋರ್ಟ್ ಮಾಡಿರೋದ್ರಿಂದಲೇ ನೀನು ಇಂದು ಇಷ್ಟು ಮುಂದೆ ಬಂದಿರುವುದು, ಕಣ್ಣಿಗೆ ಹೆಣ್ಣಿಗೆ ಬಿಟ್ಟುಕೊಂಡು ಹಗಲು ರಾತ್ರಿ ನಿಮ್ಮನ್ನು ಓದಿಸಿದ್ದೇವೆ, ನಿಮ್ಮನ್ನು ಓದಿಸಬೇಕಾದರೆ ಕಣ್ಣೀರಲ್ಲ ರಕ್ತ ಸುರಿಸಿ ದುಡಿದಿದ್ದೇವೆ ಅಕಸ್ಮಾತ್ ನಾನು ನಿನ್ನನ್ನು ನಮ್ಮಿಂದ ಸಾಧ್ಯವಾಗುವುದಿಲ್ಲ ಅಂತ ಬಿಟ್ಟು ಹೋಗಿದ್ರೆ ನೀನೇನ್ ಆಗ್ತಿದ್ದೆ ಗೊತ್ತಾ ನೀ ಹುಟ್ಟೋಕು ಮುಂಚೆ ನಿನ್ನನ್ನ ಅಬಾರ್ಷನ್ ಮಾಡಿಸಿ ತೆಗೆಸಬೇಕು ಅಂತ ಮಾಡಿದ್ದೆ ನಾನೇನು ಮಾಡಿದ್ರೂ ನಿನಗೆ ಅದರ ಕಿಮ್ಮತ್ತು ಗೊತ್ತಾಗ್ತಾ ಇಲ್ಲ, ನಾನು ಸತ್ತು ಹೋದ ಮೇಲೆ ನನ್ನ ಬೆಲೆ ನಿನಗೆ ಗೊತ್ತಾಗುತ್ತದೆ... ಹೀಗೆಲ್ಲಾ ಪಾಲಕರು ತಮ್ಮ ಮಕ್ಕಳಿಗೆ ಹೇಳುವುದನ್ನು ಆಗಾಗ ನಾವು ಕೇಳುತ್ತೇವೆ. ಇದು ಅವರ ಮನದಾಳದ ಮಾತುಗಳು.

ಮಕ್ಕಳನ್ನು ಬೆಳೆಸಿ ಅವರಿಗೆ ನಾವು ಉಪಕಾರ ಮಾಡಿದ್ದೇವೆ ಎಂಬಂತಹ ಭಾವವನ್ನು ಅವರಲ್ಲಿ ಬಿತ್ತುವ ಪಾಲಕರು ಅವರಿಂದ ಕೃತಜ್ಞತೆಯ ಬೆಳೆಯನ್ನು ನಿರೀಕ್ಷಿಸುತ್ತಾರೆ. ಆದರೆ ಹಾಗೆ ಮಾಡುವುದು ಅವರ ಕರ್ತವ್ಯವಾಗಿತ್ತು ಎಂಬುದನ್ನು ಅವರು ಮರೆಯುತ್ತಾರೆ. ಆದರೆ ಇಲ್ಲಿ ಪಾಲಕರು ನೆನಪಿಸಿಕೊಳ್ಳಬೇಕಾದ ಒಂದು ವಿಷಯವಿದೆ... ತಮಗೆ ಮಕ್ಕಳಾಗಲಿ ಎಂದು ಬಯಸಿದ್ದು ಪಾಲಕರಾದ ತಾವುಗಳೇ ಹೊರತು ತಮ್ಮ ಮಕ್ಕಳಲ್ಲ ಎಂಬುದು ಅವರಿಗೆ ಅರಿವಿರಬೇಕು. ತಾಯಿಯ ಉದರದಲ್ಲಿ ಮೂಡಿದಾಗಿನಿಂದ ಮಕ್ಕಳು ಬೆಳೆದು ದೊಡ್ಡವರಾಗುವವರೆಗೆ ಅವರು ನಮ್ಮದೇ ಜವಾಬ್ದಾರಿ. ಅವರು ನಮ್ಮಿಂದ ಮೂಡಿರುತ್ತಾರೆ ಎಂಬ ಪ್ರಜ್ಞೆ ಪಾಲಕರಿಗೆ ಇರಬೇಕು.

ಪಾಲಕರ ಎಲ್ಲಾ ಹೇಳಿಕೆಗಳಿಗೆ ಮಕ್ಕಳು ಬದ್ಧರಾಗಿರಬೇಕು ಎಂಬ ನಿರೀಕ್ಷೆ ತಪ್ಪು.ಮಕ್ಕಳನ್ನು ಪಾಲಕರು ತಮ್ಮ ಭವಿಷ್ಯದ ಹೂಡಿಕೆ ಎಂದು ಭಾವಿಸಿ ತಮ್ಮೆಲ್ಲಾ ಕನಸುಗಳನ್ನು, ನಿರೀಕ್ಷೆಗಳನ್ನು ಮಕ್ಕಳು ಈಡೇರಿಸಲಿ ಎಂಬ ಆಶಯ ಖಂಡಿತ ಬೇಡ. ಮಕ್ಕಳಿಗೆ ಅವರದ್ದೇ ಆದ ನಾಳೆಗಳಿವೆ, ಬಹುಶಹ ಅವರ ನಾಳೆಗಳನ್ನು ಪಾಲಕರು ಊಹಿಸಲು ಕೂಡ ಸಾಧ್ಯವಿಲ್ಲ. ಪಾಲಕರ ಕನಸುಗಳನ್ನು ಪೂರೈಸಲು ನ ಮಕ್ಕಳು ತಮ್ಮ ಕನಸುಗಳನ್ನು ಒತ್ತಟ್ಟಿಗಿಡುವುದು ಬೇಡ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಆದ್ದರಿಂದಲೇ ಖಲೀಲ್ ಗಿಬ್ರಾನ್ ಎಂಬ ಮಹಾನ್ ದಾರ್ಶನಿಕ, ಕವಿ ನಿಮ್ಮ ಮಕ್ಕಳು ನಿಮ್ಮಿಂದ ಹೊರಹೊಮ್ಮಿದವರು ಆದರೆ ನಿಮ್ಮವರಲ್ಲ ಅವರು ಪಾಲಕ ಎಂಬ ಬಿಲ್ಲಿನಿಂದ ಹೂಡಿದ ಬಾಣಗಳು, ಗುರಿ ನಮ್ಮದಾದರೂ ತಲುಪುವ ದಾರಿ ಮತ್ತು ವೇಗ ಅವರದೇ ಅವರೆಂದು ನಮ್ಮ ಕನಸಿನ ಮುಂದುವರಿಕೆಗಳಲ್ಲ ಅವರಿಗೆ ಅವರದ್ದೇ ಆದ ಮನೆಗಳಿವೆ ಆ ಮನೆಗಳನ್ನು ನಾವು ಕನಸಿನಲ್ಲಿಯೂ ಊಹಿಸಲು ಸಾಧ್ಯವಿಲ್ಲ ಎಂಬರ್ಥ ಬರುವ ಮಾತುಗಳನ್ನು ತನ್ನ ಕವನದಲ್ಲಿ ಹೇಳಿದ್ದಾನೆ.



ಖಲೀಲ್ ಗಿಬ್ರಾನನ ಈ ಮಾತುಗಳನ್ನು ಪಾಲಕರು ಮನದಟ್ಟು ಮಾಡಿಕೊಳ್ಳಲೇಬೇಕು, ಮತ್ತು ತಮ್ಮ ಮಕ್ಕಳ ಮೇಲೆ ಅಪಾರ ಪ್ರೀತಿ ಮತ್ತು ವಿಶ್ವಾಸ ಇರಲಿ ಆದರೆ ಅವರು ನಾವು ಹೇಳಿದಂತೆಯೇ ನಡೆಯಲಿ ಎಂಬ ಹುಂಬತನ ಬೇಡ. ತಮ್ಮ ಇಂದಿನ ಜೀವನಕ್ಕೆ ತಮ್ಮ ಪಾಲಕರೇ ಕಾರಣಕರ್ತರು ಎಂಬುದನ್ನು ಯಾವ ಮಕ್ಕಳೂ ಮರೆಯುವುದಿಲ್ಲ, ಅವರಿಗೆ ಅವರದ್ದೇ ಆದ ಕರ್ತವ್ಯ ಮತ್ತು ಬದ್ಧತೆಗಳು ಇದ್ದರೂ ಕೂಡ ಅವರು ತಮಗಾಗಿ ಕರ್ತವ್ಯ ನಿರ್ವಹಿಸಿದ ತಮ್ಮ ಪಾಲಕರನ್ನು ಮರೆಯಲು ಸಾಧ್ಯವಿಲ್ಲ.

ತಮ್ಮ ಪಾಲಕರ ತ್ಯಾಗದ ಕುರಿತು ಮಕ್ಕಳು ಹೇಳಿಕೊಳ್ಳದಿರಬಹುದು ಆದರೆ ಸ್ವತಃ ಅವರಿಗೆ ಮಕ್ಕಳಾದಾಗ ತಮ್ಮ ತಂದೆ ತಾಯಿ ತಮಗೆ ಮಾಡಿದ ಸೇವೆ, ಬೆಳೆಸಿದ ರೀತಿ, ಶಾಲೆಗೆ ಕಳುಹಿಸಿ ಓದಿಸಿ ಬರೆಸಿ ವಿದ್ಯಾವಂತರನ್ನಾಗಿಸಿದ ಪರಿ, ಕಡು ಕಷ್ಟದಲ್ಲೂ ತಮ್ಮೆಲ್ಲ ಆಸೆಗಳನ್ನು ಶಕ್ತಿ ಮೀರಿ ಪೂರೈಸಲು ಪ್ರಯತ್ನಿಸಿದ ನೆನಪುಗಳು ತಮ್ಮ ಮಕ್ಕಳನ್ನು ಬೆಳೆಸುವಾಗ ಅವರಿಗೆ ಖಂಡಿತವಾಗಿಯೂ ಮರುಕಳಿಸುತ್ತವೆ. ಕೇವಲ ಒಬ್ಬಿಬ್ಬರು ಮಕ್ಕಳಿರುವ ಸಂಸಾರದಲ್ಲಿ ತನ್ನ ಮಕ್ಕಳಿಗೆ ತಾನು ಮಾಡುತ್ತಿರುವುದಕ್ಕಿಂತ ತುಸು ಹೆಚ್ಚಿನ ತ್ಯಾಗವನ್ನು ಅರೆಂಟು ಜನ ಮಕ್ಕಳನ್ನು ಹೊಂದಿರುವ ತನ್ನ ಪಾಲಕರು ಮಾಡಿದ್ದಾರೆ ಎಂಬ ಭಾವ ಆತನಲ್ಲಿ ಖಂಡಿತವಾಗಿಯೂ ಸ್ಫುರಿಸಿ ತನ್ನ ಪಾಲಕರ ಕುರಿತು ಧನ್ಯತೆ ಮತ್ತು ಕೃತಜ್ಞತೆ ಮೂಡುತ್ತದೆ ಒಳ್ಳೆಯ ಪಾಲಕರು ಜೀವನದ ಒಳ್ಳೆಯ ಸಂಗತಿಗಳನ್ನು ಅನುಭವಿಸಲು ಅತ್ಯಂತ ಅರ್ಹರಾಗಿರುತ್ತಾರೆ... ಆದರೆ ನಿರೀಕ್ಷೆಗಳು ಅವರಲ್ಲಿ ಅಸಹನೆಯನ್ನು ಉಂಟು ಮಾಡುತ್ತವೆ. ನಿಷ್ಕಾಮ ಕರ್ತವ್ಯ ಎಂದು ಕರೆಯುವುದು ಈ ಕಾರಣಕ್ಕೆ ಇರಬಹುದು. ಯಾವುದೇ ರೀತಿಯ ಆಸೆ ಆಕಾಂಕ್ಷೆಗಳನ್ನು ಹೊಂದದೆ ತಮ್ಮ ಪಾಲಿಗೆ ಬಂದ ಕರ್ತವ್ಯಗಳನ್ನು ಚಾಚೂ ತಪ್ಪದೇ ನಿರ್ವಹಿಸುವುದು.

ಹೌದಲ್ಲವೇ ಸ್ನೇಹಿತರೆ, ವೆನ್ ದೇರ್ ಇಸ್ ನೋ ಎಕ್ಸ್‌ಪೆಕ್ಟೇಶನ್, ಎವರಿಥಿಂಗ್ ವಿಲ್ ಬಿ ಎಕ್ಸೆಪ್ಟೆಡ್ ಆಸ್ ಇಟ್ ಕಮ್ಸ್ ಇನ್ ಅವರ್ ಲೈವ್ಸ್ ಯಾವುದೇ ನಿರೀಕ್ಷೆಗಳಿಲ್ಲದೆ ನಾವು ಕರ್ತವ್ಯವನ್ನು ನಿರ್ವಹಿಸಿದಾಗ, ಬಂದದ್ದೆಲ್ಲವನ್ನು' ಬಂದದ್ದೆಲ್ಲ ಬರಲಿ ಗೋವಿಂದನ ದಯೆ ಒಂದಿರಲಿ' ಎಂಬಂತೆ ನಾವು ಒಪ್ಪಿಕೊಳ್ಳುತ್ತೇವೆ. ಆ ಮೂಲಕ ಮಾನಸಿಕ ಶಾಂತಿಯನ್ನು ಹೊಂದುತ್ತೇವೆ.

# ಅವಲೋಕನ, ಅನುಸಂಧಾನ ಮತ್ತು ಅನುಷ್ಠಾನ

ನಿತ್ಯ ಅಥವಾ ಆಗಾಗ ಸಹಜ ಹಾಗೂ ಗಂಭೀರ ಕೆಲಸಗಳಲ್ಲಿ ಅರ್ಪಿಸಿಕೊಳ್ಳುವ ಸಂದರ್ಭಗಳು ಜೀವನದುದ್ದಕ್ಕೂ ಬರುತ್ತವೆ. ಅವುಗಳಲ್ಲಿ ಕೆಲವು ಮಾತ್ರ ಯಶಸ್ವಿಯಾಗಬಹುದು ಅಷ್ಟೆ. ಕೆಲವೊಮ್ಮೆ ವಸ್ತುಸ್ಥಿತಿಯನ್ನರಿಯದೇ ತೀವ್ರಗತಿಯಲ್ಲಿ ಮುಂದುವರೆದಾಗ ಅಘಾತವಾಗುವ ಸಂಭವವುಂಟು. ಒಂದು ಕ್ಷಣ ಚಿಂತನೆಗೈಯ್ಯದೆ ತಕ್ಷಣ ಕೈಗೊಳ್ಳುವ ಕೆಲಸದಿಂದ ಅನಾನುಕೂಲ ಅಥವಾ ಅಸಂಬದ್ಧ ಎದುರಾಗಬಹುದು. ಹಾಗಾಗಿಯಾವುದೇ ಕೆಲಸಕ್ಕೆ ತೊಡಗಿಕೊಳ್ಳುವುದಕ್ಕೂ ಮೊದಲು, ಅದರ ಗುಣಾವಗುಣಗಳ ಬಗೆಗೆ ಅವಲೋಕನ ನಂತರ ಅದರೊಡನೆ ಅನುಸಂಧಾನ ಆನಂತರ ಅನುಷ್ಠಾನಗೊಳಿಸುವುದು ಮುಖ್ಯ.

ವಾಹನ ಓಡಿಸುವ ಸಂದರ್ಭದಲ್ಲಿ ಅಕ್ಕಪಕ್ಕ ಹಿಂದೆಮುಂದೆ ಬರುವ ವಾಹನಗಳ ಕಡೆಗೆ ಸೂಕ್ಷ್ಮಾವಲೋಕನ ಬೇಕೇ ಬೇಕು. ಸ್ವಲ್ಪ ಆಚೆಈಚೆ ಮನ ಚಂಚಲಗೊಂಡರೆ ಎಷ್ಟೊಂದು ಅಪಾಯಕ್ಕೊಳಗಾಗುತ್ತೇವೆ. 'ಸ್ವಲ್ಪ' ಎನ್ನುವುದು ಎಚ್ಚರಿಕೆ ಅಥವಾ ಮುಂಜಾಗ್ರತೆಯ ಸೂಚನೆಯಾಗಿದೆ. ಇಡಿಯಾದ ನಮ್ಮ ಬದುಕು ಕೂಡ ರಸ್ತೆಯಲ್ಲಿ ಚಲಿಸುವ ವಾಹನದಂತೆ. ದಿನವೂ ಉತ್ತಮ ಆಲೋಚನೆ, ಅಭಿಪ್ರಾಯ, ಆರಂಭ, ಅನುಸರಣೆ ಅತ್ಯವಶ್ಯಕ ಆದರೆ ತತ್ವಗಳನ್ನು ಬಾಯಿಮಾತಿನಲ್ಲೇ ಅನುಷ್ಠಾನಕ್ಕಿಳಿಸಿ ವಾಸ್ತವಿಕ ಎತ್ತರಕ್ಕೇರದೆ ಅಲ್ಪವೆ ಸರ್ವಸ್ವವೆಂದು ಸಂತೃಪ್ತಿಗೊಳ್ಳುವುದು ಖಂಡಿತ ಶ್ರೇಯಸ್ಕರವಲ್ಲ! ನಮ್ಮ ಸುಖ-ದುಃಖ ನಮ್ಮ ಕೈಯಲ್ಲೇ ಇವೆ.

ಉದಾಹರಣೆಗೆ ಲೋಕದಲ್ಲಿ ಮೂರು ವರ್ಗದ ಜನರಿರುತ್ತಾರೆ: ಮೊದಲನೆಯ ವರ್ಗವೆಂದರೆ: ಅವಲೋಕನ, (ಅನುಸಂಧಾನ) ಮುಂದಾಲೋಚನೆ ಮಾಡದೇ (ಅನುಷ್ಠಾನ) ಆಚರಣೆ ಮಾಡುವುದು, ಎರಡನೇ ವರ್ಗದವರೆಂದರೆ: ಅನುಸಂಧಾನ ಮಾಡಿಯೂ ಅನುಷ್ಠಾನಕ್ಕೆ ಮೀನಾಮೇಷ ಮಾಡುವವರು. ಮೂರನೇ ವರ್ಗವೆಂದರೆ: ಈ ಮೂರನ್ನೂ ಅರಿಯದೇ ಅವಸರದಲ್ಲಿ ಅನಾಹುತ ಕ್ಕೀಡಾಗುವವರು.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಆತುರದಿಂದ ಆಗುವ ಅನರ್ಥ, ಅನಾಹುತಗಳನ್ನು ಆಮೇಲೆ ಸರಿಪಡಿಸಲಾಗದು. 'ರಭಸಮತಿ' ಎಂದೂ ಎಲ್ಲಿಯೂ ವರ್ಜ್ಯ. ಅದು ಅನಾಹುತಕ್ಕೆ ಒಯ್ಯುವುದೂ ಸಾಧ್ಯ. ಅದರಿಂದ ಲಾಭಗಳೇನು? ಸಮಾಜದಲ್ಲಿ ಅನೇಕರು ಮುಂದಾಲೋಚನೆ ಮಾಡದೇ ಘರ್ಷಣೆ, ಗೊಂದಲ, ಅಶಾಂತಿಗೆ ಕಾರಣರಾಗಿದ್ದಾರೆ. ಆಡಿದ ಮಾತು, ಬಿಟ್ಟ ಬಾಣ, ಕಳೆದು ಹೋದ ಸಮಯ, ಸುಡುಗಾಡಿಗೆ ಹೋದ ಹೆಣ ಮತ್ತೆಂದೂ ವಾಪಾಸು ಬರುವುದಿಲ್ಲ. ಮೊದಲೇ ಯೋಚಿಸಿ ಕಾರ್ಯಪ್ರವೃತ್ತರಾಗುವುದು ಒಳ್ಳೆಯದು.



ಮೇಲಿನ ಮೂರನ್ನೂ ತೂಗಿಸಿಕೊಂಡು ಹೋಗುವ ಗುಣವಿರುವುದು ಜ್ಞಾನಕ್ಕೆ. ಜ್ಞಾನವೆಂದರೆ ಎಚ್ಚರದಿಂದಿರುವುದು. ಶರಣೆ ನೀಲಮ್ಮನವರು ತಮ್ಮೊಂದು ವಚನದಲ್ಲಿ "ಜ್ಞಾನವಿಲ್ಲದ ಕ್ರೀಯ ಮಾಡಿದಲ್ಲಿ ಫಲವೇನು"? ಜ್ಞಾನಕ್ಕಿಂತ ಅಧಿಕವಾದುದು ಪ್ರಪಂಚದಲ್ಲಿ ಮತ್ತೊಂದಿಲ್ಲ. ಸಾಧ್ಯವಾದಷ್ಟು ಸಮಾಜಕ್ಕೆ ಒಳ್ಳೆಯದನ್ನೇ ಬಯಸುವವರ ಸಕರಾತ್ಮಕ ಚಿಂತನೆಯಲ್ಲಿ, ಈ ಮೂರರಿಂದ ಅಧಿಕ ಲಾಭವಿಲ್ಲದಿರದು. ಅನುಭಾವಿಗಳಾದವರು-ಆಧ್ಯಾತ್ಮ ತಿಳಿದವರು ಹೆಜ್ಜೆ ಹೆಜ್ಜೆಗೆ ಒಳಿತು-ಕೆಡಕುಗಳ ತುಲನೆ ಮಾಡಿ ಕಾರ್ಯ ಪ್ರವೃತ್ತರಾಗುವುದುಂಟು. ಅಂಥವರ ಮಾರ್ಗದರ್ಶನ ಸದಾ ನಮಗೆ ಒಳಿತು.

ಒಟ್ಟಾರೆ ಮಾಡುವ ಕೆಲಸಕ್ಕೂ ಮೊದಲು ಈ ಮೂರನ್ನೂ ಎಚ್ಚರಿಕೆಯಿಂದ ಗಮನಿಸಿದಾಗ ಪರಿಪೂರ್ಣ ತೃಪ್ತಿಯುಂಟಾಗಬಹುದು.

**ಕವಿ ಮನಸು**

## ಪಾವನ ನೆಲವಿದು ಭಾರತ



ಸಾವಿರ ಜನುಮದ ಪುಣ್ಯದ ಫಲವಿದು
ನಾವಿದೊ ಜನಿಸಿಹೆವಿಲ್ಲಿ
ದೇವರು ನೆಲೆಸಿದ ನಾಡಲಿ ಜನಿಸಿದೆ
ಪಾವನ ಈ ನೆಲದಲ್ಲಿ

ಉತ್ತರದಲ್ಲಿದೆ ಹಿಮಮಣಿ ಪರ್ವತ
ನೆತ್ತಿಗೆ ಇರಿಸಿದ ಮುಕುಟ
ಬತ್ತದ ಭಕ್ತಿಯು ಮಾತೆಯ ಬಗೆಗಿದು
ಉತ್ತರ ನಮ್ಮದು ಪ್ರಕಟ

ಕಡಲಿನ ಅಲೆಗಳು ದಕ್ಷಿಣ ತುದಿಯಲಿ
ಎಡೆಬಿಡದಂತೆಯೆ ಸುಳಿದು
ತಡವುತ ಮಾತೆಯ ಚರಣವ ಸಂತಸ
ಪಡುತಿವೆ ಪಾದವ ತೊಳೆದು

ಕಡಿಯಲು ಆಂಗ್ಲರ ದಾಸ್ಯದ ಸರಪಳಿ
ನಡೆಸಿದ ವಿಪ್ಲವ ನೆನೆದು
ಬಿಡುಗಡೆಗೊಳಿಸಿದ ವೀರರ ನೆನಪಿಗೆ
ಹೃದಯದಿ ಹೆಸರನು ಬರೆದು

ಕತ್ತಲು ರೂಪದ ದಾಸ್ಯವ ಕಳಚಲು
ನೆತ್ತರು ಹರಿಸಿದರಂದು
ಮತ್ತದು ಬಾಧಿಸದಂತೆಯೆ ನಮ್ಮಯ
ಚಿತ್ತದಿ ಪಣವದು ಇಂದು

ಭಾಷೆಯು ಅಗಣಿತ ಜಾತಿಯು ಹಲವಿದೆ
ಘೋಷಣೆ ಎಂದಿಗು ಒಂದು
ತೋಷದಿ ನುಡಿಯುವ ಒಮ್ಮತ ನಮ್ಮಲಿ
ಮಾಸದು ಮನದಲಿ ಎಂದು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಚಂದದ ಭಾರತ

ನಾವಿರುವ ಭೂಮಿ ಭಾರತ
ನಮ್ಮ ಜನರ ಭಾವ ಒಮ್ಮತ
ಸಹನೆ ಬಾಳ್ವೆ ನಮ್ಮ ಅಭಿಮತ
ಪ್ರೀತಿ ವಾತ್ಸಲ್ಯದಲಿ ನಾವೇ ಶ್ರೀಮಂತ।

ಗಂಗೆ ಸರಸ್ವತಿ ಕಾವೇರಿ ನದಿಗಳು
ನಮ್ಮ ಭಾರತಮ್ಮನ ಮಕ್ಕಳು
ಹಸಿರನ್ನು ಉಸಿರನು ನೀಡುವಳು
ಸಮೃದ್ಧ ನಾನು.ಎನ್ನುತ ಹರ್ಷಪಡುವಳು।

ದಾರ್ಶನಿಕರ ನಾಡು ನಮ್ಮ ನಾಡು
ಸ್ವಾತಂತ್ರಕ್ಕಾಗಿ ಜೀವ ತೆತ್ತವರ ನಾಡು
ಸಮಾಜ ಸುಧಾರಕರ ನಿಸ್ವಾರ್ಥ ನಾಡು
ನಮ್ಮ ಸಂಸ್ಕೃತಿ ಜಗ ಮೆಚ್ಚಿದ ನಾಡು।

ಸಕಲ ವೈಭವದ ಚಂದದ ಭಾರತ
ಸಕಲ ಬೆಳೆ ಬೆಳೆಯುವ ಫಲವತ್ತ ನಾಡು
ಸಕಲರನು ಪ್ರೀತಿಸುವ ನಾವೇ ಧೀಮಂತ
ಜಗದಗಲಕೆ ಭಾರತವೆಂದರೆ ಸುಂದರ ನಾಡು।

– ಚಂದ್ರಶೇಖರಯ್ಯ ರೋಣದಮಠ






# ಜಾತಿ, ಧರ್ಮ ಮೀರಿ ಆಚರಿಸುವ ಸ್ವಾತಂತ್ರ್ಯೋತ್ಸವ

## ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ । 78ನೇ ಸ್ವಾತಂತ್ರ್ಯೋತ್ಸವ ಧ್ವಜಾರೋಹಣಾ ಕಾರ್ಯಕ್ರಮ

■ ಹಂಪಿ ಟೈಮ್ಸ್ ಬಳ್ಳಾರಿ

ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ-ಬಲಿದಾನಗಳಿಂದ ಲಭಿಸಿದಂತಹ ಸ್ವಾತಂತ್ರ್ಯದ ಹಬ್ಬವು ದೇಶದಲ್ಲಿ ಜಾತಿ, ಧರ್ಮ ಎಲ್ಲೆ ಮೀರಿ ಆಚರಿಸುವ ಹಬ್ಬವಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿದರು. ಜಿಲ್ಲಾಡಳಿತದಿಂದ ನಗರದ ವಿಮ್ಸ್ ಮೈದಾನದಲ್ಲಿ ಗುರುವಾರ ಏರ್ಪಡಿಸಿದ್ದ 78ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣಾ ನೆರವೇರಿಸಿ, ಸ್ವಾತಂತ್ರ್ಯೋತ್ಸವದ ಸಂದೇಶ ನೀಡಿ ಅವರು ಮಾತನಾಡಿದರು. ರಾಷ್ಟ್ರಕ್ಕೆ ಸ್ವಾತಂತ್ರ್ಯೋತ್ಸವ ತಂದುಕೊಟ್ಟಂತಹ ಅನೇಕ ಮಹಾನ್ ಹೋರಾಟಗಾರರನ್ನು ಹಾಗೂ ಸಾವಿರಾರು ವೀರ ಯೋಧರನ್ನು ಸ್ಮರಿಸಿಕೊಳ್ಳುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

**ಬಳ್ಳಾರಿ ಜಿಲ್ಲೆಯ ಕೊಡುಗೆ ಅಪಾರ:** ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಬಳ್ಳಾರಿ ಜಿಲ್ಲೆಯು ತನ್ನದೇ ಆದ ಮಹತ್ತರ ಕಾಣಿಕೆ ನೀಡಿದೆ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವು ರಾಷ್ಟ್ರೀಯ ಭಾವೈಕ್ಯತೆಯ ಸಂಕೇತವಾಗಿತ್ತು. ಕನ್ನಡ ಹಾಗೂ ತೆಲುಗು ಮಾತನಾಡುವ ಜನರು ಭಾಷಾ ಭೇದವನ್ನು ಮರೆತು, ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ಜಿಲ್ಲೆಯ ಅನೇಕ ಹೋರಾಟಗಾರರನ್ನು ನೆನೆಯಬೇಕು. ಇಲ್ಲಿನ ದ್ವಿಭಾಷಾ ಸಂಸ್ಕೃತಿಯು ವಿಶಿಷ್ಟದ ಸಂಗತಿಯಾಗಿದೆ ಎಂದು ಅವರು ಮನನ ಮಾಡಿದರು.

ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರು ಅವರು, 1947 ರ ಕಾಲಘಟ್ಟದಲ್ಲಿ ದೇಶದ ಅಭಿವೃದ್ಧಿಗೆ ಪಣ ತೊಟ್ಟಿದ್ದರು. ಅಂದಿನ ಸಮಯದಲ್ಲಿ ಭಾರತಕ್ಕೆ ಒಂದು ಸೂಜಿಯನ್ನೂ ತಯಾರಿಸುವ ಶಕ್ತಿ ಇರಲಿಲ್ಲ. ಆಗ, ಅವರ ದೂರದೃಷ್ಟಿಯ ಮೂಲಕ ಹೊಸ ಭಾರತವನ್ನು ಕಟ್ಟಿದರು. ಎಲ್ಲಾ ವಿಭಾಗದಲ್ಲೂ ಭಾರತವನ್ನು ಉನ್ನತೀಕರಿಸಿದರು. ಇಂದು ಭಾರತ ಇಸ್ರೋನಂತಹ ಹೆಮ್ಮೆಯ ಸಂಸ್ಥೆಯನ್ನು ಅಂತರಿಕ್ಷ ಕ್ಷೇತ್ರದಲ್ಲಿ ಹೊಸ ಸಾಧನೆಗೆ ಸಾಕ್ಷಿಯಾಗಿದ್ದು, ಸಾಲು ಸಾಲು ರಾಕೆಟ್ ಹಾರಿಸುವ ಮೂಲಕ ವಿಶ್ವದ ಮುಂದುವರೆದ ರಾಷ್ಟ್ರಗಳಿಗೂ ಸವಾಲೆಸೆದಿದೆ ಎಂದು ಹೇಳಿದರು.

ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಮಾಜಿಕ ಸಮಾನತೆಯನ್ನು ತಲುಪಿಸಬೇಕು ಎಂಬ ಡಾ.ಬಿ.ಆರ್.ಅಂಬೇಡ್ಕರ್ ಅವರ ಹೋರಾಟ ವಿಶ್ವ ಹೋರಾಟದ ಇತಿಹಾಸದಲ್ಲೊಂದು ಮೈಲುಗಲ್ಲು ಆಗಿದೆ. ಸರ್ವಾಧಿಕಾರ ಉಚ್ರಾಯ ಸ್ಥಿತಿಯಲ್ಲಿರುವ, ಅಭಿವ್ಯಕ್ತಿ ಸ್ವಾತಂತ್ರ್ಯವೇ ಪ್ರಶ್ನಾರ್ಥಕವಾಗಿರುವ ಇಂದಿನ ದಿನಗಳಲ್ಲಿ ನೆಹರು-ಅಂಬೇಡ್ಕರ್ ರಂತಹ ನಾಯಕರನ್ನು ಅರ್ಥಮಾಡಿಕೊಳ್ಳಬೇಕು ಎಂದು ಯುವಪೀಳಿಗೆಗೆ ಕಿವಿಮಾತು ಹೇಳಿದರು.

ರಾಷ್ಟ್ರೀಯ ಐಕ್ಯತೆಗೆ, ರಾಷ್ಟ್ರದ ರಕ್ಷಣೆಗೆ ಹಾಗೂ ದೇಶದ ಸಮಗ್ರತೆಗೆ ಎಲ್ಲರೂ ಒಟ್ಟಾಗಿ ಶ್ರಮಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಅವರು ಹೇಳಿದರು.

ಸಮಾಜದ ಸಂಪತ್ತು ಕಟ್ಟಕಡೆಯ ವ್ಯಕ್ತಿಗೂ ತಲುಪಿಸುವಲ್ಲಿ ನಮ್ಮ ಸರ್ಕಾರವು ಕಟಿಬದ್ಧವಾಗಿದ್ದು, ಬಡವರು ದುಡಿದ ಹಣವನ್ನು ಅವರಿಗೇ ನೀಡಲು ರಾಜ್ಯ ಸರ್ಕಾರವು ಮಹತ್ವದ ಐದು ಗ್ಯಾರಂಟಿಗಳನ್ನು ಜಾರಿಗೆ



ತಂದಿದೆ ಎಂದರು.

**ಶಕ್ತಿ ಯೋಜನೆ:** ಮಹಿಳೆಯರ ಸಬಲೀಕರಣಕ್ಕಾಗಿ ರಾಜ್ಯದ ಮಹಿಳೆಯರು ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಶಕ್ತಿ ಯೋಜನೆ ಜಾರಿಗೆ ತಂದಿದ್ದು, ಬಳ್ಳಾರಿ ಜಿಲ್ಲೆಯಲ್ಲಿ ಜುಲೈ ಅಂತ್ಯದವರೆಗೆ 2,91,40,000 ಮಹಿಳೆಯರು ಪ್ರಯಾಣಸಿದ್ದು, 10,19,370,211 ರೂ. ವೆಚ್ಚ ಭರಿಸಲಾಗಿದೆ. ರಾಜ್ಯಾದ್ಯಂತ ಈವರೆಗೆ ಒಟ್ಟು 2,66,72,12,266 ಮಹಿಳೆಯರಿಗೆ ಉಚಿತ ಟಿಕೆಟ್ ನೀಡುವ ಮೂಲಕ ಹೊಸ ದಾಖಲೆಗೆ ನಾಂದಿ ಹಾಡಲಾಗಿದೆ.

**ಅನ್ನಭಾಗ್ಯ:** ಹಸಿವು ಮುಕ್ತ ಕರ್ನಾಟಕ ಮಾಡಲು ಅನ್ನಭಾಗ್ಯ ಯೋಜನೆಯಡಿ ಪ್ರತಿ ಫಲಾನುಭವಿಗೆ ಪ್ರತಿ ತಿಂಗಳು 10 ಕೆಜಿ ಆಹಾರ ಧಾನ್ಯ ನೀಡಲಾಗುತ್ತಿದ್ದು, ಉಚಿತ 5 ಕೆಜಿ ಅಕ್ಕಿ ಬದಲಿಗೆ ರೂ.170 ಹಣವನ್ನು ಡಿಬಿಟಿ ಮೂಲಕ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗುತ್ತಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಜುಲೈ ಅಂತ್ಯದವರೆಗೆ 10,25,833 ಫಲಾನುಭವಿಗಳಿಗೆ 5 ಕೆಜಿ ಪಡಿತರ ಅಕ್ಕಿಯೊಂದಿಗೆ ರೂ.170 ಸೇರಿ ಒಟ್ಟಾರೆ 1,89,77,01,500 ಗಳನ್ನು ಅನುದಾನ ಜಮಾ ಮಾಡಲಾಗಿದೆ. ರಾಜ್ಯಾದ್ಯಂತ ಒಟ್ಟಾರೆ 6445.64 ಕೋಟಿ ಫಲಾನುಭವಿಗಳಿಗೆ ಅನ್ನಭಾಗ್ಯ ಯೋಜನೆ ನೀಡಲಾಗಿದೆ.

**ಗೃಹಲಕ್ಷ್ಮೀ ಯೋಜನೆ:** ಸ್ತ್ರೀ ಸ್ವಾವಲಂಬನೆಯತ್ತ ದಿಟ್ಟ ಹೆಜ್ಜೆಯಾದ ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ರೂ.2000 ನೇರವಾಗಿ ಫಲಾನುಭವಿ ಖಾತೆಗೆ ವರ್ಗಾವಣೆ ಮಾಡಲಾಗುತ್ತಿದ್ದು, ಜಿಲ್ಲೆಯಲ್ಲಿ ಮೇ ವರೆಗೆ 2,78,733 ಫಲಾನುಭವಿಗಳಿಗೆ ತಲಾ ರೂ.2000 ಗಳಂತೆ ಒಟ್ಟು ರೂ.55,74,66,000 ಮೊತ್ತ ಪಾವತಿ ಮಾಡಲಾಗಿದೆ. ರಾಜ್ಯಾದ್ಯಂತ ಒಟ್ಟಾರೆ 1.23ಕೋಟಿ ಫಲಾನುಭವಿಗಳಿಗೆ ಹಣ ಜಮಾ ಮಾಡಲಾಗಿದೆ.

**ಗೃಹಜ್ಯೋತಿ:** ಮನೆ-ಮನ ಬೆಳಗುವ ಭಾಗ್ಯದ ಬೆಳಕು ಗೃಹಜ್ಯೋತಿ ಯೋಜನೆಯಡಿ ಪ್ರತಿ ಮನೆಗೆ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ಪೂರೈಸಲಾಗುತ್ತಿದ್ದು, ಬಳ್ಳಾರಿ ಜಿಲ್ಲೆಯಲ್ಲಿ ಜುಲೈ ಮಾಹೆಯವರೆಗೆ 93,245 ಫಲಾನುಭವಿಗಳಿಗೆ ಒಟ್ಟು ರೂ.5.21 ಕೋಟಿ ಅನುದಾನವನ್ನು ಭರಿಸಲಾಗಿದೆ. ರಾಜ್ಯಾದ್ಯಂತ ಒಟ್ಟಾರೆ 1.51 ಕೋಟಿ ಮನೆಗಳಿಗೆ ರೂ.8,239 ಕೋಟಿ ಹಣವನ್ನು ವ್ಯಯಿಸಲಾಗಿದೆ.

**ಯುವನಿಧಿ:** ಯುವಕರ ಶ್ರೇಯೋಭಿವೃದ್ಧಿಗಾಗಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಯುವನಿಧಿ ಯೋಜನೆಯಡಿ ಪದವೀಧರರಿಗೆ ಮತ್ತು ಡಿಪ್ಲೋಮಾದಾರರಿಗೆ ಪ್ರತಿ ಮಾಹೆ ರೂ.3000 ಮತ್ತು 1500 ರಂತೆ ಒಟ್ಟು 24 ತಿಂಗಳ ಕಾಲ ಈ ಯೋಜನೆಯಡಿ ನಿರುದ್ಯೋಗ ಭತ್ಯೆಯನ್ನು ಬಳ್ಳಾರಿ ಜಿಲ್ಲೆಯ 4327 ಫಲಾನುವಿಗಳಿಗೆ ನೀಡಲಾಗಿದ್ದು, ರಾಜ್ಯದಲ್ಲಿ ಒಟ್ಟಾರೆ 3,03,386 ಫಲಾನುಭವಿಗಳಿಗೆ ರೂ.96,80,73,000 ಕೋಟಿ ಹಣ ನೀಡಲಾಗಿದೆ ಎಂದು ವಿವರವಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರ ಮತ್ತು ಕ್ರೀಡೆಗಳಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಬಹುಮಾನ ಪಡೆದ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು. ನಂತರದಲ್ಲಿ ಶಾಲಾ ವಿದ್ಯಾರ್ಥಿಗಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ನೋಡುಗರ ಮನ ಸೆಳೆದವು.

ಬಳಿಕ ಸಚಿವರು, ನಗರದ ದೈಹಿಕ ವಿಕಲಚೇತನರಿಗೆ 13 ಯಂತ್ರಚಾಲಿತ ತ್ರಿಚಕ್ರ ವಾಹನಗಳನ್ನು ವಿತರಣೆ ಮಾಡಿದರು.

**ಲ್ಯಾಂಡ್ ಬೀಟ್:** ರಾಜ್ಯದಲ್ಲಿ ಒಟ್ಟು 1.40 ಕೋಟಿ ಎಕರೆ ಸರ್ಕಾರಿ ಜಮೀನು ಇದ್ದು, ಲ್ಯಾಂಡ್ ಬೀಟ್ ಮೊಬೈಲ್ ತಂತ್ರಾಂಶದ ಮೂಲಕ ಒಟ್ಟು 91,000 ಎಕರೆ ಜಮೀನುಗಳು ಒತ್ತುವರಿಯಾಗಿರುವುದನ್ನು ಗುರುತಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿದರು.

ಜಿಲ್ಲಾಡಳಿತದಿಂದ ನಗರದ ವಿಮ್ಸ್ ಮೈದಾನದಲ್ಲಿ ಏರ್ಪಡಿಸಿದ್ದ 78 ನೇ ಸ್ವಾತಂತ್ರೋತ್ಸವದ ಧ್ವಜಾರೋಹಣಾ ನೆರವೇರಿಸಿದ ಬಳಿಕ ಸುದ್ದಿಗಾರರನ್ನುದ್ದೇಶಿಸಿ ಅವರು ಅವರು ಮಾತನಾಡಿದರು.

ಈಗಾಗಲೇ 14.32 ಲಕ್ಷ ಸರ್ಕಾರಿ ಜಮೀನುಗಳ ಸ್ಥಳ ಪರಿಶೀಲನೆಗೆ ಸೂಚಿಸಿದ್ದು, ಈ ಪೈಕಿ 13.04 ಲಕ್ಷ ಜಮೀನುಗಳಿಗೆ ಗ್ರಾಮಲೆಕ್ಕಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಇದರಲ್ಲಿ ಕಂದಾಯ ಇಲಾಖೆಯ 1.93 ಲಕ್ಷ ಜಮೀನುಗಳು ಇದ್ದು, ವಿವಿಧ 20 ಇಲಾಖೆಗಳ ಜಮೀನುಗಳನ್ನೂ ಗುರುತಿಸಲಾಗಿದೆ ಎಂದರು.

ಕೆರೆ ಮತ್ತು ಸ್ಮಶಾನಗಳ ಹೆಚ್ಚುವರಿ ಜವಾಬ್ದಾರಿ ತೆಗೆದುಕೊಂಡು, ಸಮೀಕ್ಷೆ ನಡೆಸಲಾಗಿದೆ. ಈಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ ಶೇ.80.27 ರಷ್ಟು ಅಂದರೆ 55.638 ಸರ್ಕಾರಿ ಜಮೀನುಗಳ ಪೈಕಿ 48,786 ಆಸ್ತಿಗಳನ್ನು ಲ್ಯಾಂಡ್ ಬೀಟ್ ತಂತ್ರಾಂಶಕ್ಕೆ ಒಳಪಡಿಸಲಾಗಿದೆ. ಆಗಸ್ಟ್ ತಿಂಗಳಿನಿಂದ ಸರ್ವೆಯರ್ ಲಭ್ಯತೆ ನೋಡಿಕೊಂಡು ಒತ್ತುವರಿ ತೆರವು ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ಭೂ ಸುರಕ್ಷಾ ಕಾರ್ಯಕ್ರಮ:** ಭೂ ಸುರಕ್ಷಾ ಕಾರ್ಯಕ್ರಮದಡಿ ಎಲ್ಲ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಇಂಡೆಕ್ಸ್ ಮಾಡಿ ಡಿಜಿಟಲೀಕರಣ ಮಾಡಲಾಗಿದೆ. ಈವರೆಗೆ ಒಟ್ಟು 4,43,27,379 ಕೋಟಿ ಪುಟಗಳನ್ನು ಸ್ಕ್ಯಾನ್ ಮಾಡಲಾಗಿದೆ. 31 ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲಾಗಿದ್ದು, ಉಳಿದ ತಾಲೂಕುಗಳಲ್ಲೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಣಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಮುಂದಿನ ಒಂದು ವರ್ಷದೊಳಗೆ ದಾಖಲೆಗಳ ಡಿಜಿಟಲೀಕರಣ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ಇದರಿಂದ ಸಾರ್ವಜನಿಕರಿಗೆ ದಾಖಲೆಗಳನ್ನು ಒದಗಿಸುವುದರ ಜೊತೆಗೆ, ದಾಖಲೆಗಳ ತಿರುಚುವಿಕೆ, ದಾಖಲೆಗಳ ನಾಪತ್ತೆ ಮೊದಲಾದವುಗಳನ್ನು ತಡೆಯಬಹುದಾಗಿದೆ. ಬಳ್ಳಾರಿ ಜಿಲ್ಲಾಧಿಕಾರಿಗಳ ಅಭಿಲೇಖನಾಲಯದ ಸೇರಿದಂತೆ ಈಗಾಗಲೇ 23,11,771 ಪುಟಗಳ ಮೌಲ್ಯಾಧಾರಿತ ರೈತರ ದಾಖಲೆಗಳನ್ನು ಗಣಕೀಕರಿಸಲಾಗಿದ್ದು, ರೈತರು ಇದರ ಸದುಪಯೋಗ ಪಡಿಸಿಕೊಳ್ಳಬಹುದು ಎಂದರು.

**ಪಹಣಿ-ಆಧಾರ್ ಜೋಡಣೆ:** ಜಮೀನು ಮಾರಾಟದಲ್ಲಿ ವಂಚನೆ ತಡೆಯಲು ಪಹಣಿ-ಆಧಾರ್ ಜೋಡಣೆ ಕೈಗೊಳ್ಳಲಾಗಿದೆ. ಒಬ್ಬರು ಮೂರ್ನಾಲ್ಕು ದಶಕಗಳಿಂದ ಜಮೀನು ಸಾಗುವಳಿ ಮಾಡುತ್ತಿದ್ದು, ಅದಕ್ಕೆ ಬೇರೆ ವ್ಯಕ್ತಿಗಳು ಭೂ ಮಂಜೂರಾತಿ ಮಾಡಿಸಿಕೊಳ್ಳುವ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಯೋಜನೆಯಲ್ಲಿ ಈಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ ಶೇ.80 ರಷ್ಟು 5,23,542 ರೈತರ ಜಮೀನು ಪೈಕಿ 4,12,084 ಭೂ ಮಾಲೀಕರ ಜಮೀನನ್ನು ಅವರ ಆಧಾರ ಸಂಖ್ಯೆಗೆ ಜೋಡಣೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ವಿಧಾನಪರಿಷತ್ ಶಾಸಕ ವೈ.ಎಂ.ಸತೀಶ್, ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಉಪ ಮಹಾಪೌರರಾದ ಡಿ.ಸುಕುಂ, ಬುಡಾ ಅಧ್ಯಕ್ಷ ಜೆ.ಎಸ್.ಆಂಜನೇಯುಲು, ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ಬಿ.ಎಸ್.ಲೋಕೇಶ್ ಕುಮಾರ್, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಅರಣ್ಯ ಉಪ-ಸಂರಕ್ಷಣಾಧಿಕಾರಿ ಸಂದೀಪ್ ಸೂರ್ಯವಂಶಿ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಮಹಾನಗರ ಪಾಲಿಕೆಯ ಸದಸ್ಯರು, ಜನಪ್ರತಿನಿಧಿಗಳು ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

# ದೇಶಕ್ಕಾಗಿ ಶ್ರಮಿಸಿದ ಯೋಧರ ಸ್ಮರಿಣೆ



**ಮೊದಲ ಪುಟದಿಂದ**

ಇಂದು ಪಿಯು ಕಾಲೇಜಿನ ವಿದ್ಯಾರ್ಥಿನಿ ಕವಿತಾ ಅವರಿಗೆ ದ್ವಿಚಕ್ರ ವಾಹನ ಸ್ಕೂಟಿಯ ಜೊತೆಗೆ 1ಲಕ್ಷ ಪ್ರೋತ್ಸಾಹ ಧನ ನೀಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಯಕ್ರಮದಲ್ಲಿ ಘೋಷಣೆ ಮಾಡಿದರು.

ದ್ವಿತೀಯ ಪಿಯುಸಿಯ 40 ಟಾಪರ್‌ಗೆ ದ್ವಿಚಕ್ರ ವಾಹನ ವಿತರಣೆಗೆ ಚಾಲನೆ: ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿಯ ಹೆಚ್ಚು ಅಂಕಗಳನ್ನು ಗಳಿಸಿದ ರಾಜ್ಯದ 40 ಟಾಪರ್ಸ್ ವಿದ್ಯಾರ್ಥಿಗಳಿಗೆ ಸಚಿವರಾದ ಬಿ.ಝೆಡ್ ಜಮೀರ್ ಅಹ್ಮದ್ ಖಾನ್ ಅವರು ವೈಯಕ್ತಿಕವಾಗಿ ದ್ವಿಚಕ್ರ ವಾಹನ ನೀಡುವ ಮೂಲಕ ಪ್ರೋತ್ಸಾಹಿಸುತ್ತಿದ್ದು, ಈ ಕಾರ್ಯಕ್ರಮಕ್ಕೆ ವಿಜಯನಗರ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ವಿಭಾಗದ 2ನೇ ಪಿಯುಸಿ ವಿದ್ಯಾರ್ಥಿಗಳಿಗೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಬರುವ 2ನೇ ಪಿಯುಸಿಯ ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಯ ವಿದ್ಯಾರ್ಥಿಗಳಿಗೆ ಸಚಿವರು ಸ್ಕೂಟಿ ನೀಡಿ, ಸ್ಕೂಟಿಯಲ್ಲಿ ವಿದ್ಯಾರ್ಥಿನಿಯನ್ನು ಕೂರಿಸಿಕೊಂಡು ಒಂದು ಸುತ್ತು ಖುದ್ದಾಗಿ ವಾಹನ ಚಲಾಯಿಸುವುದರ ಮೂಲಕ ಈ ದ್ವಿಚಕ್ರ ವಾಹನ ವಿತರಣೆಗೆ ಚಾಲನೆ ನೀಡಿದರು.

ಆಕರ್ಷಕಪಥಸಂಚಲನ,ಸಾಂಸ್ಕೃತಿಕಕಾರ್ಯಕ್ರಮಗಳು: ಪರೇಡ್ ಕಮಾಂಡರ್ ಶಶಿಕುಮಾರ್ ನೇತೃತ್ವದಲ್ಲಿ ಪೊಲೀಸ್, ಗೃಹರಕ್ಷದಳ, ಎನ್.ಸಿ.ಸಿ., ಗೈಡ್ಸ್, ಸೇವಾದಳ, ವಿವಿಧ ಶಾಲೆಗಳು ಒಳಗೊಂಡಂತೆ ಒಟ್ಟು 12 ತಂಡಗಳಿಂದ ಆಕರ್ಷಕ ಪಥಸಂಚಲನ ನಡೆಯಿತು. ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಮಕ್ರಮಗಳು ನಡೆದವು.

2024-25ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿಜಯನಗರ ಜಿಲ್ಲೆಯ ಅಲ್ಪಸಂಖ್ಯಾತ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಾದ ಅಬ್ದುಲ್ಲಾ ಹೆಚ್., ಸಮೀರ್ ಎ., ಮಹಮ್ಮದ್ ಫರಾನ್ ಎ ಜಮ್ ಖಾನ್, ಮಹಮ್ಮದ್ ಯಾಸಿನ್, ಗುಲಾಮ್ ಮಹಮ್ಮದ್ ಗೌಸ್, ಆಪ್ಸಾ ಫಾತೀಮಾ, ಮದೀಹಾ ಆಫ್ನಾನ್, ಕಡ್ಲೆಹುರಿ ಎ ಮಹಮ್ಮದ್ ಖಾಲಿದ್, ಅಪ್ಸನಾ ಬಾನು ಹಾಗೂ ದ್ವಿತೀಯ ಪಿಯುಸಿಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಾದ ಮೇಹರಾಜುದ್ದೀನ್, ಕಲ್ಲಿಮನಿ ರಾಜಾಭಕ್ಷಿ, ದೊಡ್ಡಮನಿ ನಿಶಾ ಬೇಗಂ, ಮಹಮ್ಮದ್ ಆರೀಫ್, ಪಿ.ಸಮ್ರೀನ್, ಬಿ.ಮೊಹಮ್ಮದ್ ಸಾಕೀಬ್, ಮಹಮ್ಮದ್ ಆಶ್ಫಾಕ್, ಹೆಚ್.ಸುಭಾನ್, ರುಕ್ಸಾನ ವಿದ್ಯಾರ್ಥಿಗಳಿಗೆ ಮೌಲಾನ ಅಬ್ದುಲ್ ಕಲಾಂ ಅಜಾದ್ ಪ್ರತಿಭಾ ಪುರಸ್ಕಾರದ ಜೊತೆ ಸಚಿವರು ವೈಯಕ್ತಿಕವಾಗಿ ತಲಾ 12,000 ರೂ.ಗಳನ್ನು ನಗದು ಬಹುಮಾನ ನೀಡಿದರು.

ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಅಧೀನದಲ್ಲಿನ ಹತ್ತನೇ ತರಗತಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಹೀದಾ ಹಾಗೂ ಆಸ್ಮಬಾನು, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ರಾಧಿಕಾ ಮತ್ತು ನುಪ್ಪನಗೌಡ್ರ ಪಲ್ಲವಿ ಎಂಬ ವಿದ್ಯಾರ್ಥಿನಿಯರಿಗೆ ಸಚಿವರು ದ್ವಿಚಕ್ರ ವಾಹನ ನೀಡಿದರು.

ವಿಜಯನಗರ ಜಿಲ್ಲೆಯಲ್ಲಿ ಹತ್ತನೇ ತರಗತಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಕೊಟ್ಟೂರಿನ ಗುರುದೇವ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್‌ನ ಆದಿತ್ಯಾ ಎಸ್.ಎಂ. ಹಾಗೂ ಸೃಜನ್ ಬಿ.ಎಸ್, ಹರಪನಹಳ್ಳಿಯ ವಿ.ವಿ.ಎಸ್. ಹೈಸ್ಕೂಲ್‌ನ ಸಾಗರ್ ಕೆ.ಸಿ ಹಾಗೂ ಹಡಗಲಿ ತಾಲ್ಲೂಕಿನ ಉತ್ತಂಗಿಯ ಸರ್ಕಾರಿ ಪ್ರೌಢ ಶಾಲೆಯ ಚಿರಾಗ್ ಸಿ ವಿದ್ಯಾರ್ಥಿಗಳಿಗೆ ಮತ್ತು ಅಂಗಾಂಗ ದಾನ ಮಾಡಿದ ದುರುಗೇಶ್ ಹಗರಿಬೊಮ್ಮನಹಳ್ಳಿ ಹಾಗೂ ಸಾತ್ವಿಕ್ ಕೂಡ್ಲಿಗಿ ಅವರ ಪೋಷಕರಿಗೆ ಕಾರ್ಯಕ್ರಮದಲ್ಲಿ ಸನ್ಮಾನ ಮಾಡಲಾಯಿತು.




ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**16–08–2024 – ಶುಕ್ರವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೂಲ |
| ಯೋಗ | : ವಿಷ್ಕುಂಭ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:04:49 |
| ಸೂರ್ಯಾಸ್ತ | : 18:57:07 |
| ರಾಹು ಕಾಲ | : 10:54–12:31 |
| ಯಮಘಂಡ ಕಾಲ | : 15:44–17:21 |
| ಗುಳಿಕ ಕಾಲ | : 07:41–09:18 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 15–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1625.22 ಅಡಿ |
| ಒಳ ಹರಿವು | 35437 ಕ್ಯುಸೆಕ್ |
| ಹೊರ ಹರಿವು | 110614 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 77.211 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1628.54 ಅಡಿ |
| ಒಳ ಹರಿವು | 5548 ಕ್ಯುಸೆಕ್ |
| ಹೊರ ಹರಿವು | 9710 ಕ್ಯುಸೆಕ್ |
| ಸಾಮರ್ಥ್ಯ | 88.683 ಟಿಎಂಸಿ |

# ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿ

## ಶಿಕ್ಷಣ ಪ್ರೇಮಿ ಕೆ.ರವಿಶಂಕರ ಹೇಳಿಕೆ | ಸರ್ಕಾರಿ ಪ್ರೌಢಶಾಲೆಗೆ ಕಂಪ್ಯೂಟರ್ ಕೊಡುಗೆ




**■ ಹಂಪಿ ಟೈಮ್ಸ್ ಹೊಸಪೇಟೆ**


ಸರ್ಕಾರಿ ಶಾಲೆ ಮಕ್ಕಳಲ್ಲಿ ಅಡಗಿರುವ ಪ್ರತಿಭೆ ಮತ್ತು ಕ್ರಿಯಾಶೀಲತೆಯನ್ನು ಶಿಕ್ಷಕರು ಗುರುತಿಸಿ ಪ್ರೋತ್ಸಾಹಿಸಬೇಕು. ಶಿಕ್ಷಕರ–ಶಿಕ್ಷಕರ ನಡುವಿನ ಸಾಮರಸ್ಯವನ್ನು ವಿದ್ಯಾರ್ಥಿಗಳು ಗಮನಿಸಿ ಪಾಲಿಸುತ್ತಾರೆ. ಶಿಕ್ಷಕರ ನಡುವೆ ಪರಸ್ಪರ ಸ್ನೇಹ, ಗೌರವ, ಸೌಹಾರ್ಧತೆಯು ಮಕ್ಕಳ ಮೇಲೆ ಪರಿಣಾಮ ಬೀರುವುದರಿಂದ ತಾವು ಬದಲಾಗುವುದರೊಂದಿಗೆ ಮಕ್ಕಳನ್ನು ಉತ್ತಮರನ್ನಾಗಿಸುವ ಹೊಣೆಗಾರಿಗೆ ಶಿಕ್ಷಕರ ಮೇಲಿದೆ. ವಿದ್ಯಾರ್ಥಿಗಳು ಶಿಕ್ಷಕರ ಸಲಹೆ, ಮಾರ್ಗದರ್ಶನ ದಂತೆ ನಡೆದಾಗ ದೇಶದ ಸತ್ಪ್ರಜೆಯಾಗಲು ಸಾಧ್ಯ ಎಂದು ಶಿಕ್ಷಣ ಪ್ರೇಮಿ, ದಾನಿಗಳಾದ ಕೆ.ರವಿಶಂಕರ ಹೇಳಿದರು.

ನಗರದ ಅನಂತಶಯನಗುಡಿ ಸರ್ಕಾರಿ ಪ್ರೌಢಶಾಲೆಯಲ್ಲಿ 78ನೇ ಸ್ವಾತಂತ್ರ್ಯೋತ್ಸವ ದಂಗವಾಗಿ ಶಾಲೆಗೆ ಕಂಪ್ಯೂಟರ್ ದಾನವಾಗಿ ನೀಡಿ ಮಾತನಾಡಿದರು. ಭಾರತ ಸಂಸ್ಕಾರಕ್ಕೆ ಹೆಸರಾಗಿದೆ. ಅದನ್ನು ಉಳಿಸಿ ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಮಹತ್ತರವಾದದ್ದು. ಸರ್ಕಾರಿ ಶಾಲೆಗಳು ದೇಗುಲವಿದ್ದಂತೆ. ಪ್ರತಿನಿತ್ಯ ಶಾಲೆ ಪ್ರವೇಶಿಸುವ ಮಕ್ಕಳು ಶಾಲಾ ಪ್ರವೇಶದ್ವಾರದಲ್ಲೇ, ಭೂಮಿ ತಾಯಿಗೆ ನಮಸ್ಕರಿಸಿ ಕೈಮುಗಿದು ಒಳ ಪ್ರವೇಶಿಸುವುದರಿಂದ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬೆಳೆಯಲು ಸಹಕಾರಿಯಾಗಲಿದೆ. ಸರ್ಕಾರಿ ಶಾಲೆಗಳಲ್ಲಿ ಪ್ರತಿಭಾವಂತ ಅರ್ಹ ಶಿಕ್ಷಕರಿರುವುದರಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ. ಸರ್ಕಾರಿ ಶಾಲೆ ಮಕ್ಕಳು ಯಾವುದೇ ಕಠಿಣ ಸಮಸ್ಯೆಗಳಿದ್ದರೂ ಎದುರಿಸುವ ಸಾಮರ್ಥ್ಯ ಹೊಂದಿದ್ದಾರೆ. ಸರ್ಕಾರ ಸೌಲಭ್ಯಗಳ ಜೊತೆ ದಾನಿಗಳು ನೀಡುವ ಸಹಕಾರಗಳು ಸದುಪಯೋಗ ಪಡಿಸಿಕೊಂಡು ಮಕ್ಕಳು ಉತ್ತಮ ಸಾಧನೆ ಮಾಡಬೇಕು ಎಂದರು. ಇದೇ ಸಂದರ್ಭದಲ್ಲಿ ಇವರ ಮಾತೃಶ್ರೀ ಶ್ರೀಮತಿ ಅನ್ನಪೂರ್ಣಮ್ಮ ಸಮಾಜ ಸೇವಾ ಟ್ರಸ್ಟ್ ಮೂಲಕ ಸರ್ಕಾರಿ ಶಾಲೆಗೆ ಕಂಪ್ಯೂಟರ್‌ನ್ನು ಕೊಡುಗೆಯಾಗಿ ನೀಡುವ ಮೂಲಕ ಉದ್ಘಾಟಿಸಿ, ಸೇವೆಗೆ ಚಾಲನೆ ನೀಡಿದರು.

ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡ ಎಚ್.ವಿ.ಶರಣಸ್ವಾಮಿ ಮಾತನಾಡಿ, ಸರ್ಕಾರಿ ಶಾಲೆಯಲ್ಲಿ ಓದಿದ ಮಕ್ಕಳಿಗೆ ದೇಶದ ಆಡಳಿತ ನಡೆಸುವ ಶಕ್ತಿ ಹೆಚ್ಚಿರುತ್ತದೆ. ಪಾಲಕರು, ಶಾಲಾ ಸುತ್ತಮುತ್ತಲಿನ ಸಾರ್ವಜನಿಕರು ಸೇರಿದಂತೆ ಪ್ರತಿಯೊಬ್ಬರು ನಮ್ಮ ಸರ್ಕಾರಿ ಶಾಲೆ ನಾವೇ ಸಂರಕ್ಷಿಸಬೇಕು ಎಂಬ ನಿಲುವನ್ನು ತಾಳಿದಾಗ ಖಾಸಗಿ ಶಾಲೆಗಳಿಗಿಂತ ಮಿಗಿಲಾದ ಜ್ಞಾನ ಮಕ್ಕಳಿಗೆ ದೊರೆಯಲಿದೆ ಎಂದರು.

ಮುಖ್ಯೋಪಾಧ್ಯಾಯ ಡಾ.ಅಕ್ಕಮಹಾದೇವಿ ಮಾತನಾಡಿ, ಸರ್ಕಾರಿ ಶಾಲೆಗಳ ಅಗತ್ಯತೆಗಳನ್ನು ಅರಿತು ದಾನಿಗಳು ಮುಂದೆ ಬಂದು ದೇಣಿಗೆ, ಮೂಲಭೂತ ಸೌಕರ್ಯ ಕಲ್ಪಿಸಲು ಕೈಜೋಡಿಸುತ್ತಿರುವುದು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಲಿದೆ. ಶಾಲೆಗೆ ಗಣಕಯಂತ್ರ ಮತ್ತು ಮುಖ್ಯೋಪಾಧ್ಯಯರು ಕೂಡಲು ಉತ್ತಮ ಚೇರ್ ನೀಡಿದ ದಾನಿಗಳ ಸಾಮಾಜಿಕ ಕಾರ್ಯವನ್ನು ಶ್ಲಾಘಿಸಿದರು.

ಶಾಲಾ ಎಸ್ಡಿಎಂಸಿ ಅಧ್ಯಕ್ಷ ಪರಶುರಾಮ ಮತ್ತು ಮುಖ್ಯೋಪಾದ್ಯಾಯರಾದ ಡಾ.ಅಕ್ಕಮಹಾದೇವಿ ಧ್ವಜಾರೋಹಣ ನೆರವೇರಿಸಿದರು. ಮುಖಂಡ ಆನಂದ ನಗಾರಿ, ಸಮಾಜ ಸೇವಕರಾದ ಶಿವಶಂಕರ, ಗೋವರ್ಧನ, ಎಸ್‌ಡಿಎಂಸಿ ಸದಸ್ಯ ರಿಯಾಜ್ ಸೇರಿದಂತೆ ಇತರ ಸದಸ್ಯರು ಉಪಸ್ಥಿತರಿದ್ದರು. ರಮೇಶ ನಿರ್ವಹಿಸಿದರು. ಶಿಕ್ಷಕಿ ಶೋಭ ಆಚಾರಿ ವಂದಿಸಿದರು. ಶಾಲಾ ಮಕ್ಕಳು ಕನ್ನಡ, ಇಂಗ್ಲೀಷ್, ಹಿಂದಿ ಭಾಷೆಯಲ್ಲಿ ಸ್ವಾತಂತ್ರ್ಯೋತ್ಸವದ ಕುರಿತು ನಿರರ್ಗಳವಾಗಿ ಭಾಷಣ ಮಾಡಿ, ಭೂಮಿಕಾ, ಸಮಯ್ಯಿ ಮತ್ತು ಪ್ರಿಯಾಂಕ ಗಣ್ಯರಿಂದ ಮೆಚ್ಚುಗೆ ಪಡೆದು ನಗದು ಬಹುಮಾನ ಸ್ವೀಕರಿಸಿದರು. ನಂತರ ಮಕ್ಕಳಿಂದ ದೇಶ ಭಕ್ತಿ ಗೀತೆ, ನೃತ್ಯ ಜರುಗಿದವು.





# ಸ್ಟಾಪ್ ಗೇಟ್ ಸಿದ್ಧ, ಬೃಹತ್ ಕ್ರೇನ್ ಬಳಕೆ ಡ್ಯಾಂ ಗೇಟ್ ಅಳವಡಿಕೆಗೆ ಹರಸಾಹಸ

## ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಪರಿಶೀಲನೆ






**■ ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಗುರುವಾರ ಸಂಜೆ ತುಂಗಭದ್ರಾ ಆಣೆಕಟ್ಟು ಬಳಿ ಸ್ಟಾಪ್ ಗೇಟ್ ಅಳವಡಿಕೆ ಕಾರ್ಯದ ಪರಿಶೀಲನೆ ನಡೆಸಿ, ತಾಂತ್ರಿಕ ತಂಡ ದ ಮುಖ್ಯಸ್ಥ ಕನ್ನಯ್ಯ ನಾಯ್ಡು ಅವರ ಬಳಿ ಪ್ರಗತಿಯ ಮಾಹಿತಿ ಪಡೆದು ಆದಷ್ಟು ಶೀಘ್ರ ಅಳವಡಿಕೆ ಕಾರ್ಯ ಯಶಸ್ವಿಗೊಳಿಸುವಂತೆ ತಿಳಿಸಿದರು.

ತಾಂತ್ರಿಕ ತಜ್ಞ ಕನ್ನಯ್ಯ ನಾಯ್ಡು ಮಾತನಾಡಿ, ದೇಶದಲ್ಲಿ ಮೊದಲ ಬಾರಿಗೆ ಕಿತ್ತುಹೋಗಿರುವ ಕ್ರಸ್ಟ್ ಗೇಟ್ ಅಳವಡಿಕೆ ಇದಾಗಿದ್ದು, ನೀರಿನ ಹರಿವು ಇರುವುದರಿಂದ ನಮಗೆ ದೊಡ್ಡ ಸವಾಲಾಗಿದೆ. ಮೂರು ಕ್ರಸ್ಟ್ ಗೇಟ್‌ನ ಎಲಿಮೆಂಟ್ ಅಳವಡಿಕೆಯಿಂದ 25 ಟಿಎಂಸಿ ನೀರು ಪೋಲಾಗುವುದನ್ನು ತಡೆದು ಉಳಿಸಬಹುದು. ಮೊದಲ ಎಲಿಮೆಂಟ್ ಹಾಕೋದು ಕಷ್ಟದಾಯಕವಾರೂ ಮತ್ತೆರೆಡು ಎಲಿಮೆಂಟ್ ಅಳವಡಿಸುವುದು ಸರಳವಾಗಲಿದೆ. ಮೊದಲ ಬಾರಿಗೆ ಹೊಸ ಪ್ರಯತ್ನದ ಮೂಲಕ ಅಳವಡಿಸಲು ತಂಡ ಸಜ್ಜಾಗಿದೆ. ಎಲ್ಲರ ನಿರೀಕ್ಷೆಯಂತೆ ಆದಷ್ಟು ಬೇಗ ಕಾರ್ಯ ಪೂರ್ಣಗೊಳಿಸಲಾಗುವುದು ಎಂದ ಅವರು, ಮೊದಲ ಸ್ಟಾಪ್ ಲಾಗ್ ಅಳವಡಿಸಲು ಎರಡು ಕ್ರೇನ್ ಬಳಸಲಾದರೂ ಮೊದಲ ದಿನ ಕಾರ್ಯ ಪೂರ್ಣಗೊಂಡಿಲ್ಲ. ಶುಕ್ರವಾರ ಬೆಳಿಗ್ಗೆ ಮತ್ತೆ ಕಾರ್ಯಾರಂಭ ಮಾಡಲಿದ್ದೇವೆ ಎಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಗೇಟ್ ಅಳವಡಿಸುವವರೆಗೂ ವೈಕುಂಠದಲ್ಲೇ ಇರುತ್ತೇನೆ ಎಂದರು. ಗೇಟ್ ಅಳವಡಿಸುವ ಕಾರ್ಯದಲ್ಲಿ ತೊಡಗಿದ ಸಿಬ್ಬಂದಿಗೆ ವೈಯುಕ್ತಕವಾಗಿ ಬಹುಮಾನ ನೀಡುತ್ತೇನೆ ಎಂದು ಕಾರ್ಮಿಕರಿಗೆ ತಿಳಿಸಿದರು.

# ಡಿಸಿ, ತಹಶೀಲ್ದಾರರಿಂದ ಧ್ವಜಾರೋಹಣ



**■ ಹಂಪಿ ಟೈಮ್ಸ್ ಹೊಸಪೇಟೆ**

78ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿ ಗುರುವಾರದಂದು ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ್ ರಾಷ್ಟ್ರ ಧ್ವಜಾರೋಹಣ ನೇರವೇರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೊಂಗ್ಜಾಯ್ ಮೊಹಮ್ಮದ್ ಅಕ್ರಮ ಅಲಿ ಷಾ, ಅಪರ ಜಿಲ್ಲಾಧಿಕಾರಿಗಳಾದ ಇ.ಬಾಲಕೃಷ್ಣಪ್ಪ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಹೊಸಪೇಟೆತಾಲ್ಲೂಕು ಕಚೇರಿ ಆವರಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಹೊಸಪೇಟೆ ತಹಶೀಲ್ದಾರರಾದ ಶೃತಿ ಎಂ.ಎಂ. ಅವರು ರಾಷ್ಟ್ರ ಧ್ವಜಾರೋಹಣ ನೇರವೇರಿಸಿದರು. ಬಳಿಕ ಎಲ್ಲಾರಿಗೂ



78ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿ, ಸ್ವಾತಂತ್ರಕ್ಕಾಗಿ ಹೋರಾಡಿದ ಮಹನೀಯರರನ್ನು ಸ್ಮರಿಸುವ ದಿನವಿದು ಎಂದರು. ಈ ಸಂದರ್ಭದಲ್ಲಿ ಗ್ರೇಡ್–2 ತಹಶೀಲ್ದಾರರಾದ ವೆಂಕಟೇಶ, ಶಿರಸ್ತೆದಾರರಾದ ಶ್ರೀಧರ್ ಸೇರಿದಂತೆ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಆಳುವವರು, ಅಧಿಕಾರಿಗಳ ನಿರ್ಲಕ್ಷ್ಯವೇ ಅಭಿವೃದ್ಧಿಗೆ ಹಿನ್ನಡೆ

**ಮೊದಲ ಪುಟದಿಂದ**

ಸಂಸ್ಕಾರ, ಸಂಸ್ಕೃತಿಗಳ ಪಾಠ ಹೇಳಿಕೊಡಿ. ನಮ್ಮ ದೇಶ ಜಗತ್ತಿನ ಸಂಸ್ಕಾರವಂತ ದೇಶ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಗಡಿಕಾಯುವ ಯೋಧರಿಗಾಗಿ, ಅನ್ನ ನೀಡುವ ರೈತನಿಗಾಗಿ ನಾವು ಕ್ಷೇತ್ರದಲ್ಲಿ ಒಂದೊಂದು ಲಕ್ಷ ಸಸಿಗಳನ್ನು ನೆಡುವ ಮೂಲಕ ಹಸಿರೋತ್ಸವ ಹಾಗೂ ದೀಪೋತ್ಸವ ಎನ್ನುವ ಅಭಿಯಾನವನ್ನು ಕೈಗೊಳ್ಳಲಾಗಿದೆ ಎಂದರು.

ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಸಂಪೂರ್ಣ ಹಿಂದೆ ಬಿದ್ದಿವೆ. ಕಾರಣ ರಾಜ್ಯವಾಳುವವರು ಮತ್ತು ಅಧಿಕಾರಿಗಳ ನಿರ್ಲಕ್ಷ್ಯವೇ ಇದಕ್ಕೆ ಮೊದಲ ಹೊಣೆ. ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್‌ಗಳು 45–50ನೇ ವರ್ಷಕ್ಕೆ ಅವುಗಳ ಬದಲಾವಣೆ ಮಾಡಬೇಕು ಎನ್ನುವ ತಾಂತ್ರಿಕ ವಿಷಯವನ್ನೂ ಸಹ ಗಮನಿಸದ ಅಧಿಕಾರಿಗಳು, ಅವರ ಮೂಲಕ ಸಾರ್ವಜನಿಕರನ್ನಾಳುವ ರಾಜ್ಯ ಸರ್ಕಾರ ನಿರ್ಲಕ್ಷ್ಯದಿಂದ ಇಂದು ಕ್ರಸ್ಟ್‌ಗೇಟ್‌ಗಳು ಹಾಳಾಗಿದೆ. ಅದ್ದರಿಂದ ಎರಡು ಬೆಳೆಗಳಿಗೆ ನೀರುಣಿಸಲಾಗಿದ ಸರ್ಕಾರ, ಆ ವ್ಯಾಪ್ತಿಯ ರೈತರಿಗೆ ಹೆಕ್ಟರ್‌ಗಳಿಗನುಗುಣವಾಗಿ ಒಂದು ಬೆಳೆಯ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಇದಕ್ಕೂ ಮುನ್ನ ರಾಷ್ಟ್ರೀಯ ಹಬ್ಬಗಳ ಅಧ್ಯಕ್ಷರು ಹಾಗೂ ತಹಸೀಲ್ದಾರ್‌ರಾದ ಆರ್. ಕವಿತಾರವರು, ಸ್ವಾತಂತ್ರೋತ್ಸವದ 78ನೇ ವರ್ಷದ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ದೇಶದ ಸ್ವಾತಂತ್ರಕ್ಕಾಗಿ ಹೋರಾಟಮಾಡಿದ ನಮ್ಮ ಹಿರಿಯರನ್ನು ನೆನೆಯುತ್ತಾ, ಇಂದು ದೇಶದಲ್ಲಿನ ಬಡತನ, ನಿರುದ್ಯೋಗ, ಹಸಿವು, ಅಸಮಾನತೆ, ಪರಿಸರ ಮಾಲೀನ್ಯ, ಹಿಂಸೆ, ಕೋಮುದಾವ ಮನುಷ್ಯ ಬದುಕಲು ನೈಸರ್ಗಿಕವಾದ ಸಂಪನ್ಮೂಲ ಅತಿಯಾದ ಬಳಿಕೆ ಇನ್ನೂ ಅನೇಕ ಸಮಸ್ಯೆಗಳಿಂದ ಮುಕ್ತಗೊಳಿಸಲು ನಾವು ನೀವೆಲ್ಲ ಪಣತೊಡಬೇಕಾಗಿದೆ ಎಂದರು.

ಬಳಿಕ ಇದೇ ಆವರಣದಲ್ಲಿ 100 ಅಡಿ ಎತ್ತರದ ಧ್ವಜಸ್ತಂಭದಲ್ಲಿ ಶಾಸಕರಿಂದ ರಾಷ್ಟ್ರಧ್ವಜ ಹಾರಿಸಿದರು. ನಂತರ ಪಟ್ಟಣದ ವಿವಿಧ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಆಕರ್ಷಕ ನೃತ್ಯ ಕಾರ್ಯಕ್ರಮಗಳು ಜರುಗಿದವು. ಪೊಲೀಸ್ ಹಾಗೂ ಗೃಹ ರಕ್ಷಕದಳ, ಸ್ಕೌಟ್ ಆಂಡ್ ಗೈಡ್ಸ್‌ನ ವಿದ್ಯಾರ್ಥಿಗಳಿಂದ ಪಥ ಸಂಚಲನ ಜರುಗಿತು.

ಈ ವೇಳೆ ಪುರಸಭೆ ಸದಸ್ಯರಾದ ಬಿ. ಗಂಗಣ್ಣ, ನಾಗರಾಜ್ ಜನ್ನು, ಸುರೇಶ್, ವಿ.ವೀರಣ್ಣ, ಮಾಜಿ ಸದಸ್ಯ ಮೃತ್ಯುಂಜಯ ಬದಾಮಿ, ಜೆಡಿಎಸ್ ಅಧ್ಯಕ್ಷ ವೈ. ಮಲ್ಲಕಾರ್ಜುನ, ಕೃಷ್ಣಮೂರ್ತಿ, ಪುರಸಭೆ ಮುಖ್ಯಾಧಿಕಾರಿ ಪ್ರಭಾಕರ ಪಾಟೀಲ್, ಸಿಪಿಐ ವಿಕಾಸ್ ಲಂಬಾಣಿ, ಸಮಾಜ ಕಲ್ಯಾಣ ಇಲಾಖೆಯ ಆಂಜನೇಯ ಹುಲ್ಲಾಳ್, ಬಿಸಿಎಂ ನಿರ್ದೇಶಕರಾದ ರಮೇಶ್, ಸಿಡಿಪಿಒ ಭೊರೆಗೌಡ್ರು, ಪಿಡಬ್ಲೂ ಎಇಇ ಪುರುಷೋತ್ತಮ, ಮಮತಾ, ಯೋಧರಾದ ತಿಪ್ಪೇಶ, ಆನಂದ್, ವಿಠಲ್ ಮತ್ತಿತರರು ಇದ್ದರು.

ಶಾರದ ಮಂಜುನಾಥ ಮತ್ತು ಸಂಗಡಿಗರು ಪ್ರಾರ್ಥಿಸಿದರು. ತಾ.ಪಂ.ಇಒ ಡಾ.ಪರಮೇಶ್ವರಪ್ಪ, ಬಿಇಒ ಮೈಲೇಶ್ ಬೇವೂರ್, ಶಿಕ್ಷಕರಾದ ಇಟ್ಟಿಗಿ ಪ್ರಭಾಕರ ಹಾಗೂ ಶಿವಶಂಕರ ಸ್ವಾಮಿ ನಿರ್ವಹಿಸಿದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

## ಅಧ್ಯಾಯ.4 : ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

(1 ಅಂಕದ ಪ್ರಶ್ನೆಗಳು)

1). ಜಠರದಲ್ಲಿನ ಹೆಚ್ಚುವರಿ ಆಮ್ಲವನ್ನು ತಟಸ್ಥಗೊಳಿಸಲು ಬಳಸುವ ಆಮ್ಲಶಾಮಕವನ್ನು ಹೆಸರಿಸಿ.

ಉತ್ತರ : $Mg(OH)_2$ (ಮೇಗ್ನಿಷಿಯಂ ಹೈಡ್ರಾಕ್ಸೈಡ್ /ಮಿಲ್ಕ್ ಆಫ್ ಮೆಗ್ನಿಷಿಯಂ)

2). ಆಮ್ಲವನ್ನು ಸಾರರಿಕ್ತಗೊಳಿಸುವಾಗ ಆಮ್ಲವನ್ನು ನೀರಿಗೆ ಸೇರಿಸಬೇಕು. ವೈಜ್ಞಾನಿಕ ಕಾರಣ ಕೊಡಿ.

ಉತ್ತರ : ನೀರನ್ನು ಸಾರೀಕೃತ ಆಮ್ಲಕ್ಕೆ ಸೇರಿಸಿದರೆ ಉತ್ಪತ್ತಿಯಾಗುವ ಉಷ್ಣವು ಮಿಶ್ರಣ ಹೊರಸಿಡಿಯುವಂತೆ ಮಾಡಬಹುದು ಮತ್ತು ಸುಟ್ಟ ಗಾಯಗಳು ಉಂಟಾಗಬಹುದು. ಅತಿಯಾದ ಬಿಸಿಯಾಗುವಿಕೆಯಿಂದ ಗಾಜಿನ ಸಂಗ್ರಾಹಕವೂ ಒಡೆಯಬಹುದು.

3). ಆಮ್ಲೀಯ ಮತ್ತು ಪ್ರತ್ಯಾಮ್ಲೀಯ ಸ್ವಭಾವಗಳಿಗೆ ಕಾರಣವಾದ ಅಯಾನುಗಳನ್ನು ಹೆಸರಿಸಿ. JUNE-2023 ಅಥವಾ
ಆಮ್ಲ ಮತ್ತು ಪ್ರತ್ಯಾಮ್ಲಗಳಲ್ಲಿರುವ ಅಯಾನುಗಳನ್ನು ಹೆಸರಿಸಿ

ಉತ್ತರ : • ಆಮ್ಲ – $H^+$ / $H_3O^+$ (ಹೈಡೋಜನ್/ಹೈಡ್ರೋನಿಯಂ) ಅಯಾನುಗಳು
• ಪ್ರತ್ಯಾಮ್ಲ – $OH^-$ (ಹೈಡ್ರಾಕ್ಸಿಲ್) ಅಯಾನುಗಳು

4). ಶುಷ್ಕ HCl ಅನಿಲವು, ಶುಷ್ಕ ನೀಲಿ ಲಿಟ್ಮಸ್ ಕಾಗದದ ಬಣ್ಣವನ್ನು ಬದಲಾಯಿಸುತ್ತದೆಯೇ? ನಿಮ್ಮ ಸಮರ್ಥನೀಯ ಉತ್ತರ ಬರೆಯಿರಿ.

ಉತ್ತರ : ಶುಷ್ಕ HCl ಅನಿಲವು, ಶುಷ್ಕ ನೀಲಿ ಲಿಟ್ಮಸ್ ಕಾಗದದ ಬಣ್ಣವನ್ನು ಬದಲಾಯಿಸುವುದಿಲ್ಲ. ಏಕೆಂದರೆ, ಅದರಲ್ಲಿ $H^+$ ಅಯಾನುಗಳು ಇರುವುದಿಲ್ಲ.

5). ಈ ಕೆಳಗಿನ ನೈಸರ್ಗಿಕ ಆಕರಗಳಲ್ಲಿನ ಆಮ್ಲವನ್ನು ಹೆಸರಿಸಿ.
ಉತ್ತರ : 1. ತುರಿಕೆ ಗಿಡದ ಎಲೆಗಳ ಚುಚ್ಚುವ ಕೂದಲು 2. ಟೊಮ್ಯಾಟೋ
1. ತುರಿಕೆ ಗಿಡದ ಎಲೆಗಳ ಚುಚ್ಚುವ ಕೂದಲು –ಮೆಥನೋಯಿಕ್ ಆಮ್ಲ
2. ಟೊಮ್ಯಾಟೋ– ಅಕ್ಸಾಲಿಕ್ ಆಮ್ಲ

(2 ಅಂಕದ ಪ್ರಶ್ನೆಗಳು)

6). ತಟಸ್ಥೀಕರಣ ಕ್ರಿಯೆ ಎಂದರೇನು? ಒಂದು ಉದಾಹರಣೆ ಕೊಡಿ.
JUNE 2019, JULY 2022 ಅಥವಾ
ಪ್ರಬಲ ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣವನ್ನು ಪ್ರಬಲ ಹೈಡೋಕ್ಲೋರಿಕ್ ಆಮ್ಲದ ದ್ರಾವಣಕ್ಕೆ ಸೇರಿಸಲಾಗಿದೆ. ಇಲ್ಲಿ ಉಂಟಾಗಬಹುದಾದ ಕ್ರಿಯೆ ಯಾವುದು ? ಈ ಕ್ರಿಯೆಗೆ ಸರಿದೂಗಿಸಿದ ರಾಸಾಯನಿಕ ಸಮೀಕರಣವನ್ನು ಬರೆಯಿರಿ.

ಉತ್ತರ : ಆಮ್ಲ ಮತ್ತು ಪ್ರತ್ಯಾಮ್ಲಗಳ ನಡುವಿನ ಕ್ರಿಯೆಯಿಂದ ಲವಣ ಮತ್ತು ನೀರು ಉಂಟಾಗುವುದನ್ನು ತಟಸ್ಥೀಕರಣ ಕ್ರಿಯೆ ಎನ್ನುವರು.

ಉದಾಹರಣೆ : ಪ್ರತ್ಯಾಮ್ಲ + ಆಮ್ಲ → ಲವಣ ಮತ್ತು ನೀರು

$$NaOH + HCl \rightarrow NaCl + H_2O$$

7). A,B,C,D ದ್ರಾವಣಗಳ pH ಮೌಲ್ಯಗಳು ಕ್ರಮವಾಗಿ 3, 13, 9 ಮತ್ತು 2 ಆಗಿವೆ. ಅ).ಇವುಗಳಲ್ಲಿ ಅತ್ಯಂತ ಹೆಚ್ಚು ಆಮ್ಲಿಯ ಸ್ವಭಾವವನ್ನು ಹೊಂದಿರುವ ದ್ರಾವಣ ಯಾವುದು? ಏಕೆ?

ಆ). ದ್ರಾವಣಗಳನ್ನು $OH^-$ ಅಯಾನ್ ಸಾರತೆಗಳ ಇಳಿಕೆ ಕ್ರಮದಲ್ಲಿ ಜೋಡಿಸಿ.

ಉತ್ತರ : ಅ). D ದ್ರಾವಣ ಅತ್ಯಂತ ಹೆಚ್ಚು ಆಮ್ಲಿಯ ಸ್ವಭಾವವನ್ನು ಹೊಂದಿದೆ. ಏಕೆಂದರೆ, ಹೆಚ್ಚು $H^+$ ಅಯಾನುಗಳನ್ನು ಹೊಂದಿದೆ.

ಆ). $OH^-$ ಅಯಾನ್ ಸಾರತೆಗಳ ಇಳಿಕೆ ಕ್ರಮ – $13 > 9 > 3 > 2$

8). ಒಬ್ಬ ವಿದ್ಯಾರ್ಥಿಯು ಇರುವೆ ಕಡಿತದಿಂದಾಗಿ ಉರಿತದ ನೋವನ್ನು ಅನುಭವಿಸುತ್ತಿದ್ದಾನೆ. ಅವನ ಈ ಉರಿತದ ನೋವಿಗೆ ಕಾರಣವಾದ ಆಮ್ಲವನ್ನು ಹೆಸರಿಸಿ. ಅದನ್ನು ಹೇಗೆ ಉಪಶಮನಗೊಳಿಸಬಹುದು?

ಉತ್ತರ : ಉರಿತದ ನೋವಿಗೆ ಕಾರಣವಾದ ಆಮ್ಲ –ಮೆಥನೋಯಿಕ್ ಆಮ್ಲ.
ಉಪಶಮನ : ಇರುವೆ ಕಡಿದ ಭಾಗಕ್ಕೆ ಅಡುಗೆ ಸೋಡಾದಂತಹ ಸೌಮ್ಯ ಪ್ರತ್ಯಾಮ್ಲ ಲೇಪಿಸಬೇಕು.

9). ಆಮ್ಲ ಮಳೆ ಎಂದರೇನು? ಆಮ್ಲ ಮಳೆಯು ನದಿಯ ನೀರಿನ ಮೇಲೆ ಉಂಟುಮಾಡುವ ಪರಿಣಾಮವೇನು?

ಉತ್ತರ : ಮಳೆ ನೀರಿನ pH 5.6 ಕ್ಕಿಂತ ಕಡಿಮೆಯಾದರೆ ಅದನ್ನು ಆಮ್ಲ ಮಳೆ ಎನ್ನುವರು.

ಆಮ್ಲ ಮಳೆಯು ನದಿಯ ನೀರಿಗೆ ಸೇರುವುದರಿಂದ, ನದಿಯ ನೀರಿನ pH ಕಡಿಮೆಯಾಗುತ್ತದೆ. ಹಾಗೂ ನದಿಗಳಲ್ಲಿ ಜಲಚರಗಳ ಉಳಿವು ದುಸ್ತರವಾಗುತ್ತದೆ.

10). ಬೇಕಿಂಗ್ ಪುಡಿ ಎಂದರೇನು? ಬೇಕಿಂಗ್ ಪುಡಿಯನ್ನು ಬ್ರೆಡ್ ಅಥವಾ ಕೇಕ್ ತಯಾರಿಕೆಯಲ್ಲಿ ಬಳಸುತ್ತಾರೆ. ಏಕೆ?

ಉತ್ತರ : ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್ ಮತ್ತು ಟಾರ್ಟಾರಿಕ್ ಆಮ್ಲಗಳ ಮಿಶ್ರಣವೇ ಬೇಕಿಂಗ್ ಪುಡಿ.
ಬೇಕಿಂಗ್ ಪುಡಿಯನ್ನು ಕಾಯಿಸಿದಾಗ ಅಥವಾ ನೀರಿನೊಂದಿಗೆ ಮಿಶ್ರಣಗೊಳಿಸಿದಾಗ ಕಾರ್ಬನ್ ಡೈ ಆಕ್ಸೈಡ್ ಅನಿಲ ಬಿಡುಗಡೆಯಾಗುತ್ತದೆ. ಇದು ಬ್ರೆಡ್ ಅಥವಾ ಕೇಕ್‌ನ್ನು ಉಬ್ಬಿಸಿ ಮೃದು ಮತ್ತು ರಂಧ್ರ ಯುಕ್ತಗೊಳಿಸುತ್ತದೆ.

11). ಒಬ್ಬ ರೈತ ತನ್ನ ಕೃಷಿ ಭೂಮಿಗೆ ನಿರ್ದಿಷ್ಟ ಪ್ರಮಾಣದ ಸುಣ್ಣವನ್ನು ಸೇರಿಸಲು ನಿರ್ಧರಿಸಿದ್ದಾನೆ. ಅವನ ಈ ನಿರ್ಧಾರಕ್ಕೆ ಕಾರಣಗಳೇನಿರಬಹುದು ? ಅಥವಾ
ಒಂದು ಜಮೀನಿಗೆ ಕೃಷಿ ತಜ್ಞರು ನಿರ್ದಿಷ್ಟ ಪ್ರಮಾಣದ ಸುಣ್ಣವನ್ನು ಸೇರಿಸಲು ಸಲಹೆ ನೀಡಿದ್ದಾರೆ. ಇದಕ್ಕೆ ಕಾರಣಗಳೇನಿರಬಹುದು ? ವಿವರಿಸಿ? APRIL -2020


ಉತ್ತರ : ಸಸ್ಯಗಳ ಆರೋಗ್ಯಕರ ಬೆಳವಣಿಗೆಗೆ ನಿರ್ದಿಷ್ಟ pH ವ್ಯಾಪ್ತಿಯ ಅಗತ್ಯವಿದೆ. ರೈತನ ಜಮೀನಿನ ಮಣ್ಣು ಆಮ್ಲಿಯವಾಗಿದೆ.
ಸುಣ್ಣವು ಪ್ರತ್ಯಾಮ್ಲೀಯ. ಅದನ್ನು ಮಣ್ಣಿಗೆ ಸೇರಿಸಿದಾಗ ಮಣ್ಣಿನ ಆಮ್ಲೀಯತೆ ಕಡಿಮೆಯಾಗುತ್ತದೆ/ತಟಸ್ಥಗೊಳ್ಳುತ್ತದೆ.

(3 ಅಂಕದ ಪ್ರಶ್ನೆಗಳು)

12). ಹಲ್ಲಿನ ಸವೆತ ಹೇಗೆ ಉಂಟಾಗುತ್ತದೆ. ವಿವರಿಸಿ? ಇದನ್ನು ಹೇಗೆ ತಡೆಗಟ್ಟಬಹುದು? SEP 2020

ಉತ್ತರ : ಆಹಾರ ಸೇವನೆಯ ನಂತರ ಬಾಯಿಯಲ್ಲಿ ಉಳಿದ ಸಕ್ಕರೆ ಮತ್ತು ಆಹಾರದ ಕಣಗಳ ವಿಘಟನೆಯಿಂದ ಬಾಯಿಯಲ್ಲಿರುವ ಬ್ಯಾಕ್ಟೀರಿಯಾಗಳು ಆಮ್ಲಗಳನ್ನು ಉತ್ಪತ್ತಿ ಮಾಡುತ್ತವೆ. ಇದರಿಂದ ಬಾಯಿಯ pH 5.5 ಕ್ಕಿಂತ ಕಡಿಮೆಯಾಗಿ ಹಲ್ಲಿನ ಸವೆತ ಉಂಟಾಗುತ್ತದೆ.
ತಡೆಗಟ್ಟುವ ವಿಧಾನ : ಆಹಾರ ಸೇವನೆಯ ನಂತರ ಬಾಯಿಯನ್ನು ಸ್ವಚ್ಛಗೊಳಿಸುವುದು. ಹಲ್ಲುಗಳನ್ನು ಸ್ವಚ್ಛಗೊಳಿಸಲು ಪ್ರತ್ಯಾಮ್ಲೀಯವಾಗಿರುವ ಟೂತ್ ಪೇಸ್ಟ್‌ಗಳನ್ನು ಬಳಸುವುದು.

13). ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತುವಿನ ಚೂರುಗಳ ವರ್ತನೆ ಮತ್ತು ಉರಿಸುವಿಕೆಯ ಮೂಲಕ ಹೈಡ್ರೋಜನ್ ಅನಿಲದ ಪರೀಕ್ಷೆ ತೋರಿಸುವ ಉಪಕರಣದ ಜೋಡಣೆಯ ಅಂದವಾದ ಚಿತ್ರವನ್ನು ಬರೆದು ಎಲ್ಲ ಭಾಗಗಳನ್ನು ಗುರುತಿಸಿ? APRIL-SEP 2019, 2020 MARCH-JULY 2022




(ಮುಂದುವರೆಯುತ್ತದೆ......)

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

www.hampitimes.com - Hampi Times Margadarshi

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055